ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 213 RNI Number : KNKAN/25/A2770 13-08-2026 Thursday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :213 ರಾಯಚೂರು 13-08-2026 ಗುರುವಾರ ಪುಟ 04 ಬೆಲೆ ರೂ.2/- ಮೊ:8660146563

ನೂತನ ಸಚಿವರಿಗೆ ಖಾತೆಗಳ ಹಂಚಿಕೆ: ಯಾರಿಗೆ, ಯಾವ ಖಾತೆ?

ಬೆಂಗಳೂರು: ರಾಜ್ಯ ಸಚಿವ ಸಂಪುಟ ವಿಸ್ತರಣೆ ಬಳಿಕ ಬುಧವಾರ ನೂತನ ಸಚಿವರಿಗೆ ಖಾತೆಗಳನ್ನು ಹಂಚಿಕೆ ಮಾಡಲಾಗಿದೆ. ಈ ಹಿಂದಿನ ಕೆಲವು ಸಚಿವರ ಖಾತೆಗಳನ್ನು ಸಹ ಬದಲಾವಣೆ ಮಾಡಲಾಗಿದೆ.

ಜಲಸಂಪನ್ಮೂಲ ಸಚಿವರಾಗಿದ್ದ ರಾಮಲಿಂಗಾರೆಡ್ಡಿ ಅವರಿಗೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಆಹಾರ ಇಲಾಖೆಯ ಸಚಿವರಾಗಿದ್ದ ಮುನಿಯಪ್ಪ ಅವರಿಗೆ ಸಮಾಜ ಕಲ್ಯಾಣ ಇಲಾಖೆಯನ್ನು ನೀಡಲಾಗಿದೆ. ಯು.ಟಿ.ಖಾದರ್‌ಗೆ ಆರೋಗ್ಯ ಇಲಾಖೆಯ ಜೊತೆಗೆ ಅಲ್ಪಸಂಖ್ಯಾತ, ಹಜ್ ಮತ್ತು ವಕ್ಫ್ ಇಲಾಖೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಚಲುವರಾಯಸ್ವಾಮಿಗೆ ಬೃಹತ್ ಮತ್ತು ಮಾಧ್ಯಮ ನೀರಾವರಿ ಖಾತೆ ಕೊಡಲಾಗಿದೆ. ವಾಲ್ಮೀಕಿ ಹಗರಣದಲ್ಲಿ ಹೆಸರು ಕೇಳಿಬಂದಿದ್ದ ಬಿ.ನಾಗೇಂದ್ರ ಅವರಿಗೆ ಯೋಜನೆ ಮತ್ತು ಸಾಂಖ್ಯಿಕ ಖಾತೆ ಲಭಿಸಿದೆ. ಈ ಬಗ್ಗೆ ಲೋಕಭವನವು ಅಧಿಕೃತವಾಗಿ ಮಾಹಿತಿ ನೀಡಿದೆ.

ಸಚಿವರ ಖಾತೆಗಳ ಪಟ್ಟಿ ( )

ಸಚಿವರಿಗೆ ಹಂಚಲಾದ ಖಾತೆಗಳ ವಿವರ ಇಲ್ಲಿದೆ:

ಜಮೀರ್ ಅಹ್ಮದ್ - ವಸತಿ

ರಾಮಲಿಂಗಾರೆಡ್ಡಿ - ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ

ಲಕ್ಷ್ಮಣ ಸವದಿ - ಸಹಕಾರ, ಕೃಷಿ ಮಾರುಕಟ್ಟೆ

ರುದ್ರಪ್ಪ ಮಾನಪ್ಪ ಲಮಾಣಿ - ಸಕ್ಕರೆ ಮತ್ತು ಜವಳಿ

ಶಿವರಾಜ್ ತಂಗಡಗಿ - ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ

ಯು.ಟಿ. ಖಾದರ್ - ಅಲ್ಪಸಂಖ್ಯಾತ ಕಲ್ಯಾಣ, ಹಜ್ ಮತ್ತು ವಕ್ಫ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ

ಟಿ. ರಘುಮೂರ್ತಿ - ಪರಿಶಿಷ್ಠ ವರ್ಗಗಳ ಕಲ್ಯಾಣ

ಡಾ.ಅಜಯ್ ಸಿಂಗ್ - ಸಣ್ಣ ನೀರಾವರಿ ಮತ್ತು ಐಟಿ-ಬಿಟಿ

ಚಲುವರಾಯಸ್ವಾಮಿ - ಬೃಹತ್ ಮತ್ತು ಮಧ್ಯಮ ನೀರಾವರಿ

ಮಧು ಬಂಗಾರಪ್ಪ - ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ

ಬಸವರಾಜ ರಾಯರೆಡ್ಡಿ - ಉನ್ನತ ಶಿಕ್ಷಣ ಇಲಾಖೆ

ಶಿವಲಿಂಗೇಗೌಡ - ಅಬಕಾರಿ

ಪುಟ್ಟರಂಗ ಶೆಟ್ಟಿ - ಪಶುಸಂಗೋಪನೆ ಮತ್ತು ರೇಷ್ಮೆ

ವಿಜಯಾನಂದ ಕಾಶಪ್ಪನವರ್ - ಸಣ್ಣ ಕೈಗಾರಿಕೆ, ಸಾರ್ವಜನಿಕ ಉದ್ದಿಮೆ

ಸಂತೋಷ್ ಲಾಡ್ - ಕಾರ್ಮಿಕ ಇಲಾಖೆ

ಕೆ.ಎಸ್. ಬಸವಂತಪ್ಪ - ಮುಜರಾಯಿ , ಮೀನುಗಾರಿಕೆ, ಬಂದರು ಜಲಸಾರಿಗೆ, ಎಸ್.ಎಸ್. ಮಲ್ಲಿಕಾರ್ಜುನ - ಗಣಿ ಭೂ ವಿಜ್ಞಾನ, ತೋಟಗಾರಿಕೆ, ರಿಜ್ವಾನ್ ಅರ್ಷದ್ - ಆಹಾರ ಮತ್ತು ನಾಗರಿಕ, ನರೇಂದ್ರಸ್ವಾಮಿ - ಕೃಷಿ, ಹೆಚ್.ಸಿ. ಬಾಲಕೃಷ್ಣ - ಪೌರಾಡಳಿತ,ಬಿ. ನಾಗೇಂದ್ರ - ಯೋಜನೆ ಮತ್ತು ಸಾಂಖ್ಯಿಕ,ಕೆ.ಹೆಚ್. ಮುನಿಯಪ್ಪ - ಸಮಾಜ ಕಲ್ಯಾಣ



ಉದ್ಯಮಗಳ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಳ್ಳಿ: ಜಿ.ಯು.ಹುಡೇದ್

ರಾಯಚೂರು ಆಗಸ್ಟ್ 12

ವಿದ್ಯಾರ್ಥಿನಿಯರು ಸಕ್ರಿಯವಾಗಿ ಪಾಲ್ಗೊಳ್ಳುವುದರ ಜೊತೆಗೆ ಯಾವುದೇ ಪ್ರಮಾಣದ ಉದ್ಯಮಗಳಾಗಲಿ ಅವುಗಳನ್ನು ಪ್ರಾರಂಭಿಸುವ ಮೊದಲು ಉದ್ಯಮಗಳ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಳ್ಳುವದು ಬಹಳ ಅವಶ್ಯಕ ಎಂದು ಸಿಡಾಕ್ ಸಲಹೆಗಾರರಾದ ಜಿ.ಯು.ಹುಡೇದ ಅವರು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.



ಇತ್ತೀಚೆಗೆ ರಾಯಚೂರಿನ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಬೆಂಗಳೂರು ಹಾಗೂ ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್), ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ 3 ದಿನಗಳ ಉದ್ಯಮಶೀಲತಾ ತಿಳುವಳಿಕೆ ಕಾರ್ಯಕ್ರಮದ ಸಮಾರೋಪ ಸಮಾರಂಭವನ್ನು ಉದ್ದೇಶಿಸಿ ಮಾತನಾಡುತ್ತಾ, ಉದ್ಯಮಗಳನ್ನು ಪ್ರಾರಂಭಿಸುವವರಿಗೆ ಸರ್ಕಾರದಿಂದ ಹಲವು ಯೋಜನೆಗಳನ್ನು ಜಾರಿಗೆ ತರಲಾಗಿದೆ, ಎಂದು ತಿಳಿಸಿ ಅರ್ಥಿಕ ಅಭಿವೃದ್ದಿಗೆ ಉದ್ಯಮಗಳ ಪಾತ್ರ ಮಹತ್ವತ್ತಾಗಿದೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲರಾದ ಡಾ. ಸುಗುಣ ಬಸವರಾಜ, ಇವರು ಬಿ ಎ, ಬಿಕಮ್, ಬಿ ಎಸ್ ಸಿ ಅಂತಿಮ ವರ್ಷದ ವಿದ್ಯಾರ್ಥಿನಿಯರಿಗೆ ತರಬೇತಿ ನೀಡಿದ ಕಾಂ ಶಾಘ್ಲಿಸುತ್ತಾ, ಮುಂದೆ ಬರುವ ದಿನಗಳಲ್ಲಿ ಸರಿಯಾದ ಗುರಿಯನ್ನು ಇಟ್ಟುಕೊಂಡು ಸಮಾಜವನ್ನು ದೇಶವನ್ನು ಬಲಪಡಿಸುವ ನಿಟ್ಟಿನಲ್ಲಿ ಧನಾತ್ಮಕ ಆಲೋಚನೆಗಳನ್ನು ಬೆಳೆಸಿಕೊಳ್ಳಬೇಕು ಎಂದು ನುಡಿದರು. ವಿದ್ಯಾರ್ಥಿನಿಯರಿಗೆ ಸಿಡಾಕ್ ಸಂಸ್ಥೆಯಿದ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು.

ಸಿಡಾಕ್ ಮುಖಾಂತರ ತರಬೇತಿ ಪಡೆದು ಉದ್ಯಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುತ್ತಿರುವ ಶ್ರೀಮತಿ ನಾಗರತ್ನ, ಅವರು ತಮ್ಮ ಅನುಭವ ಹಂಚಿಕೊಡರು, ಶಿಬಿರಾರ್ಥಿಗಳಾದ ಕುಮಾರಿ ಅಶ್ವಿನಿ, ಕುಮಾರಿ ಸಾನಿಯಾ ಇವರುಗಳು ತರಬೇತಿ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಡರು.

ಉದ್ಯಮವನ್ನು ಆಯ್ಕೆ ಮಾಡುವ ವಿಧಾನ, ವ್ಯಾಪಾರೋದ್ಯಮಗಳ ಅವಕಾಶಗಳು, ಉದ್ಯಮಗಳನ್ನು ಪ್ರಾರಂಭಿಸುವ ಹಂತಗಳು, ಸ್ವಯಂ ಉದ್ಯೋಗಕ್ಕೆ ಇರುವ ಸರ್ಕಾರದ ಯೋಜನೆಗಳು, ಬ್ಯಾಂಕ್ ವ್ಯವಹಾರ, ಲೆಕ್ಕ ಪತ್ರ ನಿರ್ವಹಣೆ, ಯೋಜನಾ ವರದಿ ತಯಾರಿಕೆ, ಸಾಲ ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸುವಲ್ಲಿ ಸಹಾಯ ನೀಡುವದು, ಇತ್ಯಾದಿ ವಿಷಯಗಳ ಬಗ್ಗೆ ಸಂಪನ್ಮೂಲ ವ್ಯಕ್ತಿಗಳಿಂದ, ಇಲಾಖೆ ಅಧಿಕಾರಿಗಳು ಹಾಗೂ ಬ್ಯಾಂಕ್ ಅಧಿಕಾರಿಗಳಿಂದ ಉಪನ್ಯಾಸ / ಮಾಹಿತಿ ನೀಡಲಾಯಿತು ಎಂದು ಶ್ರೀ ನಾಗರಾಜ ಕೆ, ಸಿಡಾಕ್ ತರಬೇತಿದಾರರು, ತಿಳಿಸಿದರು.

ಸಮಾರಂಭದಲ್ಲಿ ಕುಮಾರಿ ಸಂಗಿತಾ ಪ್ರಾರ್ಥಿಸಿದರು. ನಾಗರಾಜ ಕೆ, ತರಬೇತಿದಾರರು, ಸಿಡಾಕ್, ರಾಯಚೂರು ಇವರು ಕಾರ್ಯಕ್ರಮ ನಿರೂಪಿಸಿ ಸ್ವಾಗತಿಸಿದರು.

3ನೇ ಪುಟ.....

ಚರ್ಚ್, ದೇವಸ್ಥಾನದ ವಿಚಾರವಾಗಿ ಜಗಳ: 15 ಮಂದಿಗೆ ಗಾಯ, 20 ಮಂದಿ ವಿರುದ್ಧ ಎಫ್ ಐಆರ್

ರಾಯಚೂರು: ದೇವಸ್ಥಾನ ಹಾಗೂ ಚರ್ಚ್ ವಿಚಾರವಾಗಿ ಎರಡು ಗುಂಪುಗಳ ನಡುವೆ ಗಲಾಟೆ ನಡೆದು ಸುಮಾರು 15 ಮಂದಿ ಗಾಯಗೊಂಡ ಘಟನೆ ರಾಯಚೂರು ತಾಲೂಕಿನ ಗಿಲ್ಲೆಸುಗೂರು ಕ್ಯಾಂಪ್‌ನಲ್ಲಿ ನಡೆದಿದೆ. ಈ ಸಂಬಂಧ 20 ಮಂದಿಯ ವಿರುದ್ಧ ಇಡಪನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಇಲ್ಲಿನ ಪುನರ್ವಸತಿ ಸ್ಥಳದಲ್ಲಿ ನಿರ್ಮಿಸಲಾಗಿರುವ ಚರ್ಚ್ ಮತ್ತು ಆಂಜನೇಯ ದೇವಸ್ಥಾನದ ವಿಚಾರವಾಗಿ ಕಳೆದ ಎರಡು ತಿಂಗಳಿಂದ ವಿವಾದ ನಡೆಯುತ್ತಿದೆ. ಈ ಹಿಂದೆ ಜಿಲ್ಲಾಧಿಕಾರಿ, ತಹಶೀಲ್ದಾರ್ ಹಾಗೂ ಪೊಲೀಸ್ ಇಲಾಖೆಯ ಸಮುಖದಲ್ಲಿ ಸಂಧಾನ ನಡೆಸಲಾಗಿತ್ತು. ಆದರೂ ಮಂಗಳವಾರ ಅಪರಾಹ್ನ 2 ಗಂಟೆ ಸುಮಾರಿಗೆ ಮತ್ತೆ ಅಸಮಾಧಾನ ಸ್ಫೋಟಗೊಂಡಿದೆ.

ಎರಡು ಗುಂಪುಗಳ ನಡುವೆ ಆರಂಭಗೊಂಡ ಮಾತಿನ ಚಕಮಕಿ ವಿಕೋಪಕ್ಕೆ ತಿರುಗಿದೆ. ಈ ವೇಳೆ ಎರಡು ಗುಂಪುಗಳು ಪರಸ್ಪರ ಕಲ್ಲು ತೂರಾಟ ಮಾಡಿಕೊಂಡಿವೆ. ಕಲ್ಲು ತೂರಾಟದಿಂದ ತೀವ್ರವಾಗಿ ಗಾಯಗೊಂಡಿರುವ ಇಬ್ಬರನ್ನು ರಾಯಚೂರಿನ ಒಪೆಕ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮಾಹಿತಿ ತಿಳಿಯುತ್ತಿದ್ದಂತೆ ಇಡಪನೂರು ಠಾಣೆಯ ಪೊಲೀಸರು ಹಾಗೂ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರೀಶ್ ಸ್ಥಳಕ್ಕೆ ಭೇಟಿ

3ನೇ ಪುಟ.....

ಆ.15ರಂದು ರಾಯಚೂರಿನಲ್ಲಿ ಸಚಿವ ಅಜಯ್ ಸಿಂಗ್ ಧ್ವಜಾರೋಹಣ

ರಾಯಚೂರು,ಆ.12-

ಆ.15ರ ಸ್ವಾತಂತ್ರ್ಯ ದಿನಾಚರಣೆಯಂದು ರಾಯಚೂರಿನಲ್ಲಿ ಧ್ವಜಾರೋಹಣ ನೆರವೇರಿಸಲು ಸಚಿವ ಡಾ. ಅಜಯ್ ಸಿಂಗ್ ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರದ ವಿಶೇಷ ಕಾರ್ಯದರ್ಶಿ ವೀರಭದ್ರ ಹಂಚಿನಾಳ ಆದೇಶ ಹೊರಡಿಸಿದ್ದಾರೆ.



ಕಳೆದ ವರ್ಷ ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಡಾ. ಶರಣಪ್ರಕಾಶ ಪಾಟೀಲ್ ಅವರು ಸ್ವಾತಂತ್ರ್ಯ ದಿನಾಚರಣೆಯಂದು ಧ್ವಜಾರೋಹಣ ನೆರವೇರಿಸಿದ್ದರು.

ಈ ಬಾರಿ ಸಚಿವ ಸಂಪುಟ ಪುನರ್‌ವ್ಯವಸ್ಥೆಯ ಬಳಿಕ ರಾಯಚೂರು ಜಿಲ್ಲೆಗೆ ಇನ್ನೂ ಉಸ್ತುವಾರಿ ಸಚಿವರನ್ನು ನೇಮಕ ಮಾಡಲಾಗಿಲ್ಲ. ಆದರೆ ಬರ ಅಧ್ಯಯನ ಹಾಗೂ ಪ್ರಗತಿ ಪರಿಶೀಲನೆಗಾಗಿ ಸಚಿವ ಡಾ. ಅಜಯ್ ಸಿಂಗ್ ಅವರನ್ನು ಈಗಾಗಲೇ ನೇಮಕ ಮಾಡಲಾಗಿತ್ತು. ಇದೀಗ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣದ ಜವಾಬ್ದಾರಿಯನ್ನೂ ಅವರಿಗೆ ವಹಿಸಲಾಗಿದೆ.

35ನೇ ವರ್ಷದ ರಾಜೀವ್ ಗಾಂಧಿ ಜ್ಯೋತಿ ಸದ್ಭಾವನಾ ಯಾತ್ರೆ ಆ.9ರಿಂದ ಆರಂಭ





ರಾಯಚೂರು, ಆ.12- *ಸಿಂಧನೂರು ಸಂಜೆ*

ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಸ್ಮರಣಾರ್ಥ ಹಾಗೂ ದೇಶದ ಏಕತೆ, ಸಹೋದರತ್ವ ಮತ್ತು ಸದ್ಭಾವನೆಯ ಸಂದೇಶ ಸಾರುವ 35ನೇ ವರ್ಷದ ರಾಜೀವ್ ಜ್ಯೋತಿ ಸದ್ಭಾವನಾ ಯಾತ್ರೆ ಆ.9ರಂದು ತಮಿಳುನಾಡಿನ ಶ್ರೀಪೆರಂಬದೂರಿನಿಂದ ಆರಂಭವಾಗಲಿದೆ.

ಆ.9ರಂದು ಬೆಳಿಗ್ಗೆ 9 ಗಂಟೆಗೆ ಶ್ರೀಪೆರಂಬದೂರಿನಲ್ಲಿ ಕಾಂಗ್ರೆಸ್ ಮುಖಂಡರು ಹಾಗೂ ವಿವಿಧ ರಾಜ್ಯಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ಜ್ಯೋತಿ ಯಾತ್ರೆಗೆ ಚಾಲನೆ ನೀಡಲಾಗುವುದು. ಕರ್ನಾಟಕ ಸೇರಿದಂತೆ ತಮಿಳುನಾಡು, ತೆಲಂಗಾಣ, ಮಹಾರಾಷ್ಟ್ರ, ಮಧ್ಯಪ್ರದೇಶ, ಉತ್ತರ ಪ್ರದೇಶ, ಹರಿಯಾಣ ರಾಜ್ಯಗಳ ವಿವಿಧ ನಗರಗಳ ಮೂಲಕ ಯಾತ್ರೆ ಸಾಗಲಿದೆ.

ಕರ್ನಾಟಕದಿಂದ ಸುಮಾರು 150 ಕಾಂಗ್ರೆಸ್ ಕಾರ್ಯಕರ್ತರು ಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದು, ಆ.20ರಂದು ನವದೆಹಲಿಯ ವೀರಭೂಮಿಗೆ ತಲುಪಲಿದ್ದಾರೆ. ಆ.19ರಂದು ನವದೆಹಲಿಯ 24 ಅಕ್ಬರ್ ರಸ್ತೆಯಲ್ಲಿ ಜ್ಯೋತಿಯನ್ನು ಸ್ವೀಕರಿಸುವ ಕಾರ್ಯಕ್ರಮ ನಡೆಯಲಿದೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ, ಸೇರಿದಂತೆ ಹಲವು ರಾಷ್ಟ್ರೀಯ ನಾಯಕರು ಭಾಗವಹಿಸಲಿದ್ದಾರೆ.

ರಾಜೀವ್ ಜ್ಯೋತಿ ಯಾತ್ರಾ ಸಮಿತಿಯು ದೇಶದ ಏಕತೆ, ಶಾಂತಿ, ಸಹೋದರತ್ವ ಹಾಗೂ ಭಯೋತ್ಪಾದನೆ ವಿರುದ್ಧ ಜಾಗೃತಿ ಮೂಡಿಸುವ ಉದ್ದೇಶದಿಂದ ಯಾತ್ರೆ ಹಮ್ಮಿಕೊಂಡಿದೆ. ರಾಜೀವ್ ಗಾಂಧಿ ಅವರು ರಾಷ್ಟ್ರ ನಿರ್ಮಾಣ ಮತ್ತು ದೇಶದ ಏಕತೆ ಬಲಪಡಿಸಲು ನೀಡಿದ ಕೊಡುಗೆಗಳನ್ನು ಜನರಿಗೆ ತಿಳಿಸುವುದೇ ಯಾತ್ರೆಯ ಪ್ರಮುಖ ಉದ್ದೇಶವಾಗಿದೆ.

ನಮಗೆ ಶಾಂತಿ ಬೇಕು. ವಿಶ್ವಶಾಂತಿಗಾಗಿ ಪ್ರಾರ್ಥಿಸೋಣ ಎಂಬ ಸಂದೇಶದೊಂದಿಗೆ ಯಾತ್ರೆ ಸಾಗಲಿದೆ ಎಂದು ಸಮಿತಿ ತಿಳಿಸಿದೆ.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಬಸವರಾಜ ಇಟಗಿ, ಸೈಯದ್ ಮೋಸಿನ್ ರಾಜೀವ್ ಗಾಂಧಿ ಸಂದ್ಭವನಾ ಯಾತ್ರಾ ನ್ಯಾಷನಲ್‌ವೈಸ್ ಪ್ರೆಸಿಡೆಂಟ್, ಸೈಯದ್ ಉಮರ್ ಫಾರೂಕ್ ಕರ್ನಾಟಕ ಸ್ಟೇಟ್ ವೈಸ್ ಪ್ರೆಸಿಟೆಂಡರ್

3ನೇ ಪುಟ.....

ಆಗಸ್ಟ್ 14 ರಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೇರ ಸಂದರ್ಶನ

ರಾಯಚೂರು ಆಗಸ್ಟ್ 12

ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಅಗಸ್ಟ್ 14 ರಂದು ಬೆಳಿಗ್ಗೆ 10ಗಂಟೆಯಿದ ಮಧ್ಯಾಹ್ನ 1 ಗಂಟೆವರೆಗೆ ನೇರ ಸಂದರ್ಶನ ಆಯೋಜಿಸಲಾಗಿದ್ದು, ಆಸಕ್ತ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗುವಂತೆ ಕೋರಲಾಗಿದೆ.

ನೇರ ಸಂದರ್ಶನದಲ್ಲಿ ಎರಡು ಖಾಸಗಿ ಕಂಪನಿಗಳು ಭಾಗವಹಿಸಿ ತಮ್ಮಲ್ಲಿ ಖಾಲಿ ಇರುವ ಹುದ್ದೆಗಳನ್ನು ನೇರವಾಗಿ ಭರ್ತಿ ಮಾಡಿಕೊಳ್ಳಲಿದ್ದಾರೆ.

ಅರ್ಹತೆಗಳು: ಎಸ್.ಎಸ್.ಎಲ್.ಸಿ. ಪಿ.ಯು.ಸಿ ಹಾಗೂ ಎಲ್ಲಾ ಪದವೀಧರ ಆಸಕ್ತ 18 ರಿಂದ 28 ವರ್ಷಗಳ ವರೆಗಿನ ಅಭ್ಯರ್ಥಿಗಳು ಈ ಮೇಳದಲ್ಲಿ ಭಾಗವಹಿಸಬಹುದಾಗಿದೆ.

ವಿದ್ಯಾರ್ಹತೆಯ ಅಂಕಪಟ್ಟಿಗಳ ಜೆರಾಕ್ಸ್ ಪ್ರತಿಗಳು ಮತ್ತು ತಮ್ಮ ಬಯೋಡೆಟಾ, ಆಧಾರ್ ಕಾರ್ಡ್ ಪ್ರತಿ, ಭಾವಚಿತ್ರಗನ್ನು ಸಲ್ಲಿಸಬೇಕು. ನೇರ ಸಂದರ್ಶನದಲ್ಲಿ ಭಾಗವಹಿಸಲು ಯಾವುದೇ ಶುಲ್ಕವಿರುವುದಿಲ್ಲ, ಬದಲಾಗಿ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗಬಹುದು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಬಾಲಾಜಿ ಕಾಂಪ್ಲೆಕ್ಸ್, ನೆಲ ಮಹಡಿ, ಗೂಡ್ ಶೆಡ್ ರಸ್ತೆ, ಸ್ಟೇಷನ್ ಏರಿಯಾ, ರಾಯಚೂರು ಹಾಗೂ ದೂರವಾಣಿ ಸಂಖ್ಯೆ 08532-231684, 9008211750, 8197930236ಗೆ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಪ್ರಭಾರಿ ಉದ್ಯೋಗಾಧಿಕಾರಿ ರೂಪಾ ಅಡೂರು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರಗಿನ ಮರ ಕ್ಯಾಂಪ್ ಪುನರ್ ವಸತಿ ಕೇಂದ್ರದಲ್ಲಿ ರಾಷ್ಟ್ರೀಯ ಜಂತು ಹುಳು ನಿವಾರಣ ಕಾರ್ಯಕ್ರಮ

ಸಿಂಧನೂರು: ಅಗಸ್ಟ್:11: ಸಿಂಧನೂರು ತಾಲೂಕಿನಲ್ಲಿ ಜಿಲ್ಲಾಡಳಿತ. ಜಿಲ್ಲಾ ಪಂಚಾಯತ್. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ. ಹಾಗೂ ಜವಳಗೇರಾ ಪ್ರಾಥಮಿಕ ಆರೋಗ್ಯ ಕೇಂದ್ರದ. ಸಂಯುಕ್ತ ಆಶ್ರಯದಲ್ಲಿ. ಮಕ್ಕಳಲ್ಲಿ ಜಂತುಹುಳು ಸೋಂಕಿನಿಂದ ಉಂಟಾಗುವ ಅನಾರೋಗ್ಯ ಸಮಸ್ಯೆಗಳನ್ನು ತಡೆಗಟ್ಟುವ ಉದ್ದೇಶದಿಂದ. ರಾಷ್ಟ್ರೀಯ ಜಂತುಹುಳು ನಿವಾರಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮವನ್ನು ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ್ ಉದ್ಘಾಟಿಸಿ. ಮಾತನಾಡಿದ ಅವರು. ಮಕ್ಕಳ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಯ ಮೇಲೆ ಜಂತುಹುಳು ಸೋಂಕು ದುಷ್ಪರಿಣಾಮ ಬೀರುವ ಸಾಧ್ಯತೆ ಇದೆ ಇದರಿಂದ ರಕ್ತ ಹೀನತೆ ಅಪೌಷ್ಟಿಕತೆ ಹಾಗೂ ಕಲಿಕಾ ಸಾಮರ್ಥ್ಯ ಕುಂಠಿತವಾಗುವಂತಹ ಸಮಸ್ಯೆಗಳು ಎದುರಾಗಬಹುದು. ಹೀಗಾಗಿ ರಾಷ್ಟ್ರೀಯ ಜಂತುಹುಳು ನಿವಾರಣ ಕಾರ್ಯಕ್ರಮ ದಡಿಯಲ್ಲಿ. ಅರ್ಹ ಪ್ರತಿಯೊಬ್ಬ ಮಗುವಿಗೂ ಜಂತುಹುಳು ನಿವಾರಣ ಮಾತ್ರೆ ನೀಡುವುದು ಅಗತ್ಯವಾಗಿದೆ. ಪೋಷಕರು ತಮ್ಮ ತಮ್ಮ ಮಕ್ಕಳಿಗೆ ತಪ್ಪದು ಜಂತುಹುಳು ನಿವಾರಣ ಮಾತ್ರೆ ಸೇವನೆ ಮಾಡಿಸಿ. ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಪೋಷಕರಲ್ಲಿ ಮನವಿ ಮಾಡಿದರು. ಅಂಗನವಾಡಿ ಕಾರ್ಯಕರ್ತೆ ಆದಿಲಕ್ಷ್ಮಿ ಮಾತನಾಡಿ. ಮಕ್ಕಳಲ್ಲಿ ಜಂತುಹುಳು ಸೋಂಕು ತಡೆಗಟ್ಟಲು ವೈಯಕ್ತಿಕ ಸ್ವಚ್ಛತೆ ಕಾಪಾಡುವುದು. ಶುದ್ಧ ಕುಡಿಯುವ ನೀರು ಬಳಸುವುದು. ಆಹಾರ ಸೇವಿಸುವ ಮೊದಲು ಕೈಗಳನ್ನು ಚೆನ್ನಾಗಿ



3ನೇ ಪುಟ.....

ಕಾರುಣ್ಯ ಆಶ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು 79ನೇ ವರ್ಷದ ಜನ್ಮದಿನ ಆಚರಣೆ

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ನವರು ಸರ್ವ ಸಮಾಜದ ಸಮಾನತೆಯ ಹರಿಕಾರು :ಕೆ.ಲಿಂಗರಾಜ ಹೊಸಳ್ಳಿ



ಸಿಂಧನೂರು,ಆ.12- *ಸಿಂಧನೂರು ಸಂಜೆ*

ಅಖಿಲ ಕರ್ನಾಟಕ ಎಸ್. ಸಿದ್ದರಾಮಯ್ಯ ಅಭಿಮಾನಿ ಬಳಗದ ವತಿಯಿಂದ ಕೆ. ಲಿಂಗರಾಜ ಹೊಸಳ್ಳಿ ಅವರ ಅಧ್ಯಕ್ಷತೆಯಲ್ಲಿ ಬಡವರ ಬಂಧು ಸರ್ವ ಸಮಾಜದ ಪ್ರೀತಿ ಗಳಿಸಿರುವ ಜನಪ್ರಿಯ ಮಾಜಿ ಮುಖ್ಯಮಂತ್ರಿಗಳಾದ ಎಸ್. ಸಿದ್ದರಾಮಯ್ಯ ಅವರ 79ನೇ ವರ್ಷದ ಜನ್ಮದಿನ ಸಮಾರಂಭ ಕಾರ್ಯಕ್ರಮವು ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಕಾರುಣ್ಯ ನೆಲೆ ವೃದ್ದಾಶ್ರಮ ಹಾಗೂ ವಯಸ್ಕರ ಬುದ್ದಿಮಾಂದ್ಯ ಆಶ್ರಮದಲ್ಲಿ ಆಶ್ರಯದಾತರುಗಳಿಗೆ ಹೊಸ ವಸ್ತ್ರಗಳನ್ನು ವಿತರಿಸಿ ಮಹಾಪ್ರಸಾದ ಸೇವೆ ಹಾಗೂ ಹಣ್ಣು ಹಂಪಲುಗಳನ್ನುಗಳನ್ನು ವಿತರಿಸುವ ಮೂಲಕ ಅರ್ಥಪೂರ್ಣವಾಗಿ ನೆರವೇರಿಸಲಾಯಿತು. ಈ ಕಾರ್ಯಕ್ರಮವನ್ನು ಸಸಿಗೆ ನೀರು ಹಾಕುವ ಮೂಲಕ ಗಣ್ಯರು ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಅವರ ಅಪ್ಪಟ ಅಭಿಮಾನಿಗಳಾದ ನಿರುಪಾದೆಪ್ಪ ಗುಡಿಹಾಳ ವಕೀಲರು ಅವರನ್ನು ಆಶ್ರಮದ ವತಿಯಿಂದ ಸನ್ಮಾನಿಸಿ ಗೌರವಿಸಿ ಶುಭ ಹಾರೈಸಿದರು. ಈ ಕಾರ್ಯಕ್ರಮದಲ್ಲಿ ಕಾರ್ಯಕ್ರಮವನ್ನು ಉದ್ಘಾಟಿಸಿ ನಿರುಪಾದೆಪ್ಪ ಗುಡಿಹಾಳ ವಕೀಲರು ಮಾತನಾಡಿ ನಮ್ಮ ರಾಜ್ಯ ಹಾಗೂ ದೇಶ ಕಂಡಂತಹ ಅಪ್ರತಿಮ ರಾಜಕಾರಣಿಯಾದ ಸಿದ್ದರಾಮಯ್ಯ ಅವರ 79ನೇ ವರ್ಷದ ಜನ್ಮದಿನವನ್ನು ಪ್ರತಿ ವರ್ಷದ ಪದ್ದತಿಯಂತೆ ಈ ವರ್ಷ ವಿನೂತನವಾದ ಕಾರ್ಯಗಳ ಮೂಲಕ ನಮ್ಮ ಕೆ. ಲಿಂಗರಾಜ ಹಮ್ಮಿಕೊಂಡಿರುವುದು. ಬಳ ಅತ್ಯಂತ ಮಹತ್ವಪೂರ್ಣ

3ನೇ ಪುಟ.....

ಸರಕಾರಿ ಆಸ್ಪತ್ರೆಗಳಲ್ಲೇ ಅತ್ಯುತ್ತಮ ಚಿಕಿತ್ಸೆ : ಸಚಿವ ಶರಣಪ್ರಕಾಶ್ ಪಾಟೀಲ್

ಸೇಡಂ,ಆ.12-

ಕಲಬುರಗಿ ಹಾಗೂ ಸುತ್ತಮುತ್ತಲಿನ ಜಿಲ್ಲೆಗಳ ಜನರು ಉನ್ನತ ಮಟ್ಟದ ಆರೋಗ್ಯ ಸೇವೆಗಾಗಿ ಹೈದರಾಬಾದ್, ಸೊಲ್ಲಾಪುರ ಸೇರಿದಂತೆ ಹೊರ ಜಿಲ್ಲೆಗಳಿಗೆ ಅಥವಾ ಖಾಸಗಿ ಆಸ್ಪತ್ರೆಗಳಿಗೆ ತೆರಳಿ ಲಕ್ಷಾಂತರ ರೂಪಾಯಿ ಖರ್ಚು ಮಾಡುವ ಪರಿಸ್ಥಿತಿ ತಪ್ಪಿಸಲು ಕಲಬುರಗಿಯಲ್ಲೇ ಅತ್ಯಾಧುನಿಕ ವೈದ್ಯಕೀಯ ಸೇವೆಗಳನ್ನು ಕಲ್ಪಿಸಲಾಗುತ್ತಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ್ ಹೇಳಿದರು.



ತಾಲೂಕಿನ ಬೀರನಹಳ್ಳಿ ಗ್ರಾಮದಲ್ಲಿ ಲೋಕೋಪಯೋಗಿ ಹಾಗೂ ಪಂಚಾಯತ್ ರಾಜ್ ಇಲಾಖೆ ವತಿಯಿಂದ ಮಳಖೇಡ ಮತ್ತು ಬೀರನಹಳ್ಳಿ ಗ್ರಾಮಗಳ ಪರಿಶಿಷ್ಟ ಜಾತಿ ಕಾಲೋನಿಗಳಲ್ಲಿ ಸಿಸಿ ರಸ್ತೆ ನಿರ್ಮಾಣ ಹಾಗೂ ಬೀರನಹಳ್ಳಿ-ಅರೆಬೊಮ್ಮನಹಳ್ಳಿ ರಸ್ತೆ ಪುನರ್ ನಿರ್ಮಾಣ ಕಾಮಗಾರಿಗಳಿಗೆ ಅಡಿಗಲ್ಲು ನೆರವೇರಿಸಿ ಅವರು ಮಾತನಾಡಿದರು.

ಕಲಬುರಗಿಯಲ್ಲಿ ಆರೋಗ್ಯ ಕ್ಷೇತ್ರಕ್ಕೆ ಸರ್ಕಾರ ವಿಶೇಷ ಆದ್ಯತೆ ನೀಡಿದೆ. ವಿವಿಧ ಕಾಯಿಲೆಗಳ ಚಿಕಿತ್ಸೆಗೆ ಪ್ರಾದೇಶಿಕ ಮಟ್ಟದ ಅತ್ಯಾಧುನಿಕ ಆಸ್ಪತ್ರೆಗಳು ಹಾಗೂ ಚಿಕಿತ್ಸಾ ಕೇಂದ್ರಗಳನ್ನು ಅಭಿವೃದ್ಧಿಪಡಿಸಲಾಗುತ್ತಿದ್ದು, ಇದರಿಂದ ಕಲ್ಯಾಣ ಕರ್ನಾಟಕ ಭಾಗದ ಜನರಿಗೆ ತಮ್ಮ ಊರಿನ ಸಮೀಪದಲ್ಲೇ ಗುಣ ಮಟ್ಟದ ವೈದ್ಯಕೀಯ ಸೇವೆ ದೊರೆಯಲಿದೆ ಎಂದು ತಿಳಿಸಿದರು.

ಕಲಬುರಗಿ ನಗರದಲ್ಲಿ 100 ಕೋಟಿ ರೂ. ವೆಚ್ಚದಲ್ಲಿ ನರರೋಗ ಮತ್ತು ಮೆದುಳಿನ ಚಿಕಿತ್ಸೆಯ ಪ್ರಾದೇಶಿಕ ಕೇಂದ್ರ ನಿರ್ಮಿಸಲಾಗುತ್ತಿದೆ. ಬೆಂಗಳೂರಿನ ಹೊರತಾಗಿ ಕಲಬುರಗಿಯಲ್ಲಿ 100 ಕೋಟಿ ರೂ. ವೆಚ್ಚದಲ್ಲಿ ಮಕ್ಕಳ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣವಾಗುತ್ತಿದೆ. 80 ಕೋಟಿ ರೂ. ವೆಚ್ಚದಲ್ಲಿ ಗರ್ಭಿಣಿಯರು ಹಾಗೂ ನವಜಾತ ಶಿಶುಗಳ ವಿಶೇಷ ಆರೈಕೆ ಕೇಂದ್ರ, 76 ಕೋಟಿ ರೂ. ವೆಚ್ಚದಲ್ಲಿ ಕ್ಯಾನ್ಸರ್ ಚಿಕಿತ್ಸೆಗೆ ರೇಡಿಯೋ ಥೆರಪಿ ಸೇರಿದಂತೆ ಇತರೆ ಸೌಲಭ್ಯಗಳು ಹಾಗೂ 50 ಕೋಟಿ ರೂ. ವೆಚ್ಚದಲ್ಲಿ ಮಧುಮೇಹ ನಿರ್ವಹಣೆ ಮತ್ತು ಸಂಶೋಧನಾ ಕೇಂದ್ರ ಸ್ಥಾಪಿಸಲಾಗುತ್ತಿದೆ ಎಂದು ಹೇಳಿದರು.

ರಾಜ್ಯದಲ್ಲೇ ಮೊದಲ ಅತ್ಯಾಧುನಿಕ ಬರ್ನ್ಸ್ ಯೂನಿಟ್ ಕೂಡ ಕಲಬುರಗಿಯಲ್ಲಿ ಸಿದ್ಧವಾಗಿದ್ದು, ಸುಟ್ಟ ಗಾಯಗಳಿಗೆ ಉನ್ನತ ಮಟ್ಟದ ಚಿಕಿತ್ಸೆ ನೀಡುವ ಈ ಘಟಕವನ್ನು ಮುಂದಿನ ಒಂದು ತಿಂಗಳೊಳಗೆ ಉದ್ಘಾಟಿಸಲಾಗುವುದು ಎಂದು ಸಚಿವರು ತಿಳಿಸಿದರು.

ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಸಗಿ ವೈದ್ಯಕೀಯ ಸಂಸ್ಥೆಗಳಿಗೆ ಸಮಾನವಾಗಿ ನುರಿತ ತಜ್ಞ ವೈದ್ಯರು ಹಾಗೂ ಕೋಟ್ಯಂತರ ರೂಪಾಯಿ ಮೌಲ್ಯದ ಅತ್ಯಾಧುನಿಕ ವೈದ್ಯಕೀಯ ಉಪಕರಣಗಳು ಲಭ್ಯವಿವೆ. ಬಡವರು ಹಾಗೂ ಸಾಮಾನ್ಯ ಜನರಿಗೆ ಬಹುತೇಕ ಚಿಕಿತ್ಸಾ ಸೇವೆಗಳು ಉಚಿತವಾಗಿ ದೊರೆಯುತ್ತಿವೆ. ಹೀಗಾಗಿ ಸಾರ್ವಜನಿಕರು ಖಾಸಗಿ ಆಸ್ಪತ್ರೆಗಳಿಗೆ ತೆರಳಿ ದುಬಾರಿ ವೆಚ್ಚ ಮಾಡುವ ಬದಲು ಕಲಬುರಗಿಯಲ್ಲಿ ಲಭ್ಯವಿರುವ ಸರ್ಕಾರಿ ವೈದ್ಯಕೀಯ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಮೂವರು ಸಚಿವರಿಂದ ಜಿಲ್ಲೆಗೆ ಅಭಿವೃದ್ಧಿಯ ವೇಗ : ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಕಲಬುರಗಿ ಜಿಲ್ಲೆಗೆ ಸಚಿವ ಸ್ಥಾನ ಸಿಗದೆ ಅಭಿವೃದ್ಧಿಯಲ್ಲಿ ಹಿನ್ನಡೆಯಾಗಿತ್ತು. ಪ್ರಸ್ತುತ ಕಾಂಗ್ರೆಸ್ ಸರ್ಕಾರದಲ್ಲಿ ಜಿಲ್ಲೆಗೆ ಮೂವರು ಸಚಿವರ ಪ್ರಾತಿನಿಧ್ಯ ದೊರೆತಿದ್ದು, ಈ ತ್ರಿವಳಿ ಶಕ್ತಿಯಿಂದ ಜಿಲ್ಲೆಯ ಮೂಲಸೌಕರ್ಯ, ಶಿಕ್ಷಣ ಹಾಗೂ ಉದ್ಯೋಗ ಕ್ಷೇತ್ರದಲ್ಲಿ ಹೊಸ ಅಭಿವೃದ್ಧಿಯ ವೇಗ ಮೂಡಲಿದೆ ಎಂದು ಡಾ. ಶರಣಪ್ರಕಾಶ ಪಾಟೀಲ್ ವಿಶ್ವಾಸ ವ್ಯಕ್ತಪಡಿಸಿದರು.

ಕಲಬುರಗಿಯಲ್ಲಿ ಸ್ಥಾಪಿಸಲಾಗುತ್ತಿರುವ ನರರೋಗ, ಮಕ್ಕಳ ಚಿಕಿತ್ಸೆ, ಕ್ಯಾನ್ಸರ್, ಮಧುಮೇಹ, ತಾಯಿ ಮಗು ಆರೈಕೆ ಹಾಗೂ ಬರ್ನ್ಸ್ ಚಿಕಿತ್ಸಾ ಕೇಂದ್ರಗಳಿಂದ ಕಲ್ಯಾಣ ಕರ್ನಾಟಕ ಭಾಗದ ಜನರಿಗೆ ಉನ್ನತ ಮಟ್ಟದ ವೈದ್ಯಕೀಯ ಸೇವೆಗಳು ಸ್ಥಳೀಯವಾಗಿಯೇ ದೊರೆಯಲಿವೆ. ಸಾರ್ವಜನಿಕರು ಈ ಸೌಲಭ್ಯಗಳನ್ನು ಸಮರ್ಪಕವಾಗಿ ಬಳಸಿಕೊಂಡು ದುಬಾರಿ ಖಾಸಗಿ ಚಿಕಿತ್ಸೆಯ ವೆಚ್ಚದಿಂದ ದೂರ ಉಳಿಯಬೇಕು ಎಂದು ಸಚಿವ ಡಾ. ಶರಣಪ್ರಕಾಶ ಪಾಟೀಲ್ ಕರೆ ನೀಡಿದರು. ಕಾರ್ಯಕ್ರಮದಲ್ಲಿ ಕೃಷಿಕ ಸಮಾಜದ ರಾಜ್ಯ ಪ್ರತಿನಿಧಿ ಬಸವರಾಜ ಪಾಟೀಲ ಊಡಗಿ, ಸೇಡಂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಶರಣರೆಡ್ಡಿ ಪಾಟೀಲ್, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ವಿಶ್ವನಾಥ ಪಾಟೀಲ್, ಗ್ರಾಮ ಪಂಚಾಯಿತಿ ಮಾಜಿ ಮಹೇಶ ಪಾಟೀಲ್ ತರನಳ್ಳಿ, ಧೂಳಪ್ಪ ದೊಡ್ಮನಿ, ವಿಲಾಸಗೌತಂ ನಿಡಗುಂದಾ, ರಾಮಯ್ಯ ಪೂಜಾರಿ, ಸಂತೋಷ ಕುಲಕರ್ಣಿ, ಜಗದೇವಪ್ಪ ಕೊಂಕನಹಳ್ಳಿ, ಬಸವರಾಜ ರೇವಗೊಂಡ, ನಾಗರಾಜ ನಂದೂರ, ಚಂದ್ರಶೇಖರ ಹರನಾಳ, ಮಂಜುನಾಥ ಸಾಹು ನೀಲಹಳ್ಳಿ, ಚನ್ನಬಸಪ್ಪ ಹಾಗರಗಿ, ರಾಮಯ್ಯ ಗುತ್ತೇದಾರ, ದೇವಿಂದ್ರಪ್ಪಗೌಡ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಲೋಕೋಪಯೋಗಿ ಇಲಾಖೆಯ ಎಇಇ ವಿಶ್ವನಾಥ ಮಾವಿನಗಿಡ ಸೇರಿದಂತೆ ಅಧಿಕಾರಿಗಳು ಭಾಗವಹಿಸಿದ್ದರು. ಗಣಪತಿ ಬಡಿಗೇರ ನಿರೂಪಿಸಿ ವಂದಿಸಿದರು.

126ನೇ ನೀರಾವರಿ ಸಲಹಾ ಸಮಿತಿ ಸಭೆ
ಕೊಪ್ಪಳ, ವಿಜಯನಗರ, ಬಳ್ಳಾರಿ, ರಾಯಚೂರು ಜಿಲ್ಲೆಗಳ ರೈತರಿಗೆ ಅನ್ಯಾಯ ಮಾಡುವುದಿಲ್ಲ: ಶಿವರಾಜ ತಂಗಡಗಿ



ಕೊಪ್ಪಳ ಆ.12-

ರೈತರ ನೆಮ್ಮದಿಯೇ ನಮ್ಮ ನೆಮ್ಮದಿ. ರಾಜ್ಯ ಸರ್ಕಾರ ರೈತರ ಪರವಾಗಿದೆ. ಕಾಲುವೆಗೆ ನೀರು ಹರಿಸುವ ವಿಷಯದಲ್ಲಿ ರೈತರಿಗೆ ಅನ್ಯಾಯ ಮಾಡುವುದಿಲ್ಲ ಎಂದು ಸಚಿವರಾದ ಶಿವರಾಜ ತಂಗಡಗಿ ಅವರು ಸ್ಪಷ್ಟಪಡಿಸಿದರು.

ಮುನಿರಾಬಾದ್‌ನ ಕಾಡಾ ಟಿ.ಬಿ.ಪಿ. ಸಭಾಂಗಣದಲ್ಲಿ ಆಗಸ್ಟ್ 11ರಂದು ತುಂಗಭದ್ರಾ ಯೋಜನೆ ಮತ್ತು ವಿಜಯನಗರ ಕಾಲುವೆಗಳ 126ನೇ ನೀರಾವರಿ ಸಲಹಾ ಸಮಿತಿ ಸಭೆಯ ಪೂರ್ವದಲ್ಲಿ ರೈತ ಮುಖಂಡರ ಸಲಹೆ ಪಡೆದು ಅವರು ಮಾತನಾಡಿದರು.

ಕೆಲ ಕಡೆಗಳಲ್ಲಿ ಮಳೆ ಆದಾಗ್ಯೂ ರಾಜ್ಯದಲ್ಲಿ ಬರದ ಛಾಯೆ ಇದೆ. 177 ತಾಲೂಕುಗಳಲ್ಲಿ ಬರದ ಪರಸ್ಥಿತಿ ಇದೆ. ತುಂಗಾ ಮತ್ತು ಭದ್ರಾ ಜಲಾಶಯಗಳಿಗೆ ನೀರು ಹರಿದು ಬಂದಿದೆ.

ತುಂಗಭದ್ರಾ ಜಲಾಶಯಕ್ಕೆ ಒಳ ಹರಿವು ಇದೆ. ಸದ್ಯ ಈಗ 82 ಟಿಎಂಸಿ ನೀರು ಲಭ್ಯವಿದೆ. ಜಲಾಶಯದಲ್ಲಿನ ನೀರು ಲಭ್ಯತೆ ಸ್ಥಿತಿಗತಿ ಅರಿತು ಈ ಭಾಗದ ಎಲ್ಲ ಜನಪ್ರತಿನಿಧಿಗಳ ಸಲಹೆ ಪಡೆದುಕೊಂಡು ಕಾಲುವೆಗೆ ನೀರು ಹರಿಸಲು ಕಾಲಾವಕಾಶ ನೀಡಬೇಕು ಎಂದು ಸಚಿವರು ಮನವಿ ಮಾಡಿದರು.

ಸಭೆಯಲ್ಲಿ ಶಾಸಕರಾದ ಕೆ ರಾಘವೇಂದ್ರ ಹಿಟ್ನಾಳ, ಬಸನಗೌಡ ದದ್ದಲ್, ಹಂಪನಗೌಡ ಬಾದರ್ಲಿ, ಜಿ.ಹಂಪಯ್ಯ ನಾಯಕ, ಬಸನನಗೌಡ ತುರವಿಹಾಳ, ಡಾ.ಎಸ್.ಶಿವರಾಜ ಪಾಟೀಲ, ಅನ್ನಪೂರ್ಣ ತುಕಾರಾಮ, ಜೆ ಎನ್ ಗಣೇಶ, ವಿಧಾನ ಪರಿಷತ್ ಶಾಸಕರಾದ ಬಸನಗೌಡ ಬಾದರ್ಲಿ, ಕಾಡಾ ಅಧ್ಯಕ್ಷರಾದ ಹಸನಸಾಬ ನಬಿಸಾಬ ದೋಟಿಹಾಳ, ಮುಖಂಡರಾದ ಎನ್ ಎಸ್ ಬೋಸರಾಜು, ಅಧಿಕಾರಿ ಸದಸ್ಯರಾದ ವಿವಿಧ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಕರ್ನಾಟಕ ನೀರಾವರಿ ನಿಗಮ ನಿಯಮಿತದ ಎಂಜಿನಿಯರ್ ಮನೋಜಕುಮಾರ ಗಡಬಳ್ಳಿ, ಮುನಿರಾಬಾದನ ತುಂಗಭದ್ರಾ ಯೋಜನೆ ವೃತ್ತ ಅಧೀಕ್ಷಕ ಅಭಿಯಂತರರಾದ ಎಸ್ ಬಿ ಮಲ್ಲಿಗವಾಡ, ಯರಮರಸನ ತುಂಗಭದ್ರಾ ಕಾಲುವೆ ನಿರ್ಮಾಣ ವೃತ್ತದ ಅಧೀಕ್ಷಕ ಅಭಿಯಂತರರಾದ ಸತ್ಯ ನಾರಾಯಣ ಶೆಟ್ಟಿ, ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಹನುಮನಗೌಡ ಬೆಳಗುರ್ಕಿ, ರೈತ ಮುಖಂಡರಾದ ಚಾಮರಸ ಪಾಟೀಲ, ಶರಣಪ್ಪ ಗೌಡ್ರ, ಶಂಕರಗೌಡ್ರ ಸೇರಿದಂತೆ ಕೊಪ್ಪಳ, ವಿಜಯನಗರ, ಬಳ್ಳಾರಿ ಹಾಗೂ ರಾಯಚೂರು ಜಿಲ್ಲೆಗಳ ರೈತ ಮುಖಂಡರು ಇದ್ದರು.

ಬೆಳೆ ವಿಮೆ ಹಣಕ್ಕಾಗಿ ನಿಂಬರ್ಗಾದಲ್ಲಿ ರೈತರ ಆಕ್ರೋಶ; ಪ್ರತಿಭಟನೆ



ಆಳಂದ,ಆ.12-

ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಯಡಿ ಅರ್ಹ ರೈತರಿಗೆ ಇನ್ನೂ ಬೆಳೆ ವಿಮೆ ಹಣ ಜಮೆಯಾಗದಿರುವುದನ್ನು ಖಂಡಿಸಿ ಹಾಗೂ ಕೂಡಲೇ ವಿಮೆ ಮೊತ್ತ ಬಿಡುಗಡೆ ಮಾಡುವಂತೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ಮತ್ತು ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ನಿಂಬರ್ಗಾದಲ್ಲಿ ಸೋಮವಾರ ನೂರಾರು ರೈತರು ಪ್ರತಿಭಟನೆ ನಡೆಸಿದರು.

ಬೆಳಿಗ್ಗೆ 10 ಗಂಟೆಗೆ ಆರಂಭವಾದ ಪ್ರತಿಭಟನೆ ಮಧ್ಯಾಹ್ನ 2.30ರವರೆಗೆ ನಡೆಯಿತು. ಹಲವು ತಿಂಗಳುಗಳಿಂದ ಬೆಳೆ ವಿಮೆ ಹಣಕ್ಕಾಗಿ ಕಾಯುತ್ತಿರುವ ರೈತರ ಸಮಸ್ಯೆಯನ್ನು ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಿ,

ಅರ್ಹ ಎಲ್ಲ ರೈತರ ಖಾತೆಗಳಿಗೆ ಯಾವುದೇ ವಿಳಂಬವಿಲ್ಲದೆ ವಿಮೆ ಮೊತ್ತ ಜಮೆ ಮಾಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಸ್ಥಳೀಯ ಮಟ್ಟದ ಅಧಿಕಾರಿಗಳಿಗೆ ಮನವಿ ಸಲ್ಲಿಸುವ ಬದಲು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಮನವಿ ಸಲ್ಲಿಸಲು ರೈತರು ನಿರ್ಧರಿಸಿದರು. ಬಳಿಕ ಉಪ ತಹಶೀಲ್ದಾರ್ ಆರ್. ಮಹೇಶ್, ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು ಹಾಗೂ ತಾಲ್ಲೂಕು ಕೃಷಿ ಅಧಿಕಾರಿ ಸರೋಜಿನಿ ಅವರಿಗೆ ಮನವಿ ಸಲ್ಲಿಸಲಾಯಿತು.

1520 ದಿನಗಳಲ್ಲಿ ಹಣ ಜಮೆ: ಅಧಿಕಾರಿಗಳ ಭರವಸೆ

ರೈತರ ಮನವಿ ಸ್ವೀಕರಿಸಿದ ಅಧಿಕಾರಿಗಳು, ಬೆಳೆ ವಿಮೆ ಹಣ ಜಮೆ ಮಾಡುವ ಕುರಿತು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದ್ದು, ಇನ್ನೂ 15ರಿಂದ 20 ದಿನಗಳೊಳಗಾಗಿ ಅರ್ಹ ರೈತರ ಖಾತೆಗಳಿಗೆ ಹಣ ಜಮೆಯಾಗಲಿದೆ ಎಂದು ಭರವಸೆ ನೀಡಿದರು.

ಆದರೆ, ಅಧಿಕಾರಿಗಳ ಭರವಸೆಯಿಂದ ಸಂಪೂರ್ಣ ತೃಪ್ತರಾಗದ ಪ್ರತಿಭಟನಾಕಾರರು, ನಿಗದಿತ ಅವಧಿಯಲ್ಲಿ ಹಣ ಜಮೆಯಾಗದಿದ್ದರೆ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸುವುದಾಗಿ ಎಚ್ಚರಿಸಿದರು.

ಬೆಳೆ ವಿಮೆ ಪರಿಹಾರ ತಾರತಮ್ಯ ಖಂಡಿಸಿ ಕಾಳಗಿ ಬಂದ್

ಕಾಳಗಿ,ಆ.12-

2025-26ನೇ ಸಾಲಿನ ಬೆಳೆ ವಿಮೆ ಪರಿಹಾರದಲ್ಲಿ ಕಾಳಗಿ ತಾಲೂಕಿನ ರೈತರಿಗೆ ಆಗಿರುವ ತಾರತಮ್ಯ ಖಂಡಿಸಿ, ವಿವಿಧ ಮಠಾಧೀಶರ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆ ಹಮ್ಮಿಕೊಂಡಿದ್ದ ಕಾಳಗಿ ಬಂದ್ ಮಂಗಳವಾರ ನಡೆಯಿತು.



ರೈತರ ಹೋರಾಟಕ್ಕೆ ವ್ಯಾಪಾರಸ್ಥರು ಹಾಗೂ ಸಾರಿಗೆ ಇಲಾಖೆ ಬೆಂಬಲ ಸೂಚಿಸಿದ ಹಿನ್ನೆಲೆಯಲ್ಲಿ ಬೆಳಗ್ಗೆಯಿಂದಲೇ ಪಟ್ಟಣದ ಮಾರುಕಟ್ಟೆ, ಅಂಗಡಿ- ಮುಂಗಟ್ಟುಗಳು ಹಾಗೂ ಬಸ್ ಸಂಚಾರ ಸ್ಥಗಿತಗೊಂಡಿತ್ತು. ಬಸ್ ನಿಲ್ದಾಣ ಹಾಗೂ ವಿವಿಧ ಸರ್ಕಾರಿ ಕಚೇರಿಗಳ ಸುತ್ತಮುತ್ತ ಜನಸಂಚಾರ ವಿರಳವಾಗಿತ್ತು. ವ್ಯಾಪಾರ-ವಹಿವಾಟು ಸಂಪೂರ್ಣ ಸ್ಥಗಿತಗೊಂಡಿದ್ದರಿಂದ ಪಟ್ಟಣ ಬಿಕೋ ಎನ್ನುತ್ತಿತ್ತು.

ತಾಲೂಕಿನ ವಿವಿಧ ಗ್ರಾಮಗಳಿಂದ ಸ್ವಯಂಪ್ರೇರಿತವಾಗಿ ಆಗಮಿಸಿದ ನೂರಾರು ರೈತರು ಬಸವೇಶ್ವರ ವೃತ್ತದಿಂದ ಅಂಬೇಡ್ಕರ್ ವೃತ್ತದವರೆಗೆ ಕಾಲ್ನಡಿಗೆ ಮೂಲಕ ಬೃಹತ್ ಪ್ರತಿಭಟನಾ ರ್ಯಾಲಿ ನಡೆಸಿದರು. ಬಳಿಕ ಹಳೆ ಬಸ್ ನಿಲ್ದಾಣದಲ್ಲಿ ಮಾನವ ಸರಪಳಿ ರಚಿಸಿ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ನಂತರ ಕಲಬುರಗಿ-ಚಿಂಚೋಳಿ ರಾಜ್ಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ಪರಿಹಾರದಲ್ಲಿ ತಾರತಮ್ಯ ಆರೋಪ : ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ರೈತರು, ಜಿಲ್ಲೆಯ ವಿವಿಧ ತಾಲೂಕುಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಬೆಳೆ ವಿಮೆ ಪರಿಹಾರ ಹಣ ಜಮೆಯಾಗಿದ್ದರೂ ಕಾಳಗಿ ತಾಲೂಕಿನಲ್ಲಿ ಮಾತ್ರ ಪ್ರೀಮಿಯಂ ಮೊತ್ತಕ್ಕಿಂತಲೂ ಕಡಿಮೆ ಪರಿಹಾರ ನೀಡುವ ಮೂಲಕ ತಾರತಮ್ಯ ಮಾಡಲಾಗಿದೆ ಎಂದು ಆರೋಪಿಸಿದರು.

ತಾರತಮ್ಯವನ್ನು ಸರಿಪಡಿಸಿ ಅರ್ಹ ರೈತರಿಗೆ ನ್ಯಾಯಯುತ ಬೆಳೆ ವಿಮೆ ಪರಿಹಾರ ನೀಡಬೇಕು. ಕಾಳಗಿ ತಾಲೂಕನ್ನು ಬರಪೀಡಿತ ತಾಲೂಕು ಎಂದು ಘೋಷಿಸಿ ಪ್ರತಿ ಎಕರೆಗೆ 25 ಸಾವಿರ ರೂ. ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಶಾಸಕ ಡಾ. ಅವಿನಾಶ ಜಾಧವ್ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿ, ತಾಲೂಕಿನ 14 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಬೆಳೆ ವಿಮೆ ಪರಿಹಾರ ಹಣ ಬಂದಿಲ್ಲ. ಇದರಿಂದ ರೈತರಿಗೆ ಅನ್ಯಾಯವಾಗಿದೆ ಎಂಬ ವಿಷಯವನ್ನು ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ತರಲಾಗಿದೆ. ಬೆಳೆ ಹಾನಿ ಸಮೀಕ್ಷೆ ಪರಿಶೀಲಿಸಲು ಅಧಿಕಾರಿಗಳ ವಿಶೇಷ ತಂಡ ರಚಿಸಿ, ಲೋಪ ಕಂಡು ಬಂದಲ್ಲಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಂಡು ರೈತರ ಖಾತೆಗೆ ನ್ಯಾಯಯುತ ಪರಿಹಾರ ಜಮೆ ಮಾಡಲಾಗುವುದು ಎಂದು ಸಚಿವರು ಭರವಸೆ ನೀಡಿದ್ದಾರೆ ಎಂದರು.

ಜಿಪಂ ಸದಸ್ಯ ರಾಜೇಶ್ ಗುತ್ತೇದಾರ ಮಾತನಾಡಿ, ತಾಲೂಕಿನ ರೈತರಿಗೆ ಬೆಳೆ ವಿಮೆ ಪರಿಹಾರದಲ್ಲಿ ಆಗಿರುವ ಅನ್ಯಾಯವನ್ನು ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ತಂದು ರೈತರಿಗೆ ನ್ಯಾಯ ದೊರಕಿಸಿ ಕೊಡುವುದಾಗಿ ಭರವಸೆ ನೀಡಿದರು.

ಏಳು ಗಂಟೆಗಳ ಹೆದ್ದಾರಿ ತಡೆ :

ಕಲಬುರಗಿ-ಚಿಂಚೋಳಿ ರಾಜ್ಯ ಹೆದ್ದಾರಿ ತಡೆದು ಸುಮಾರು ಏಳು ಗಂಟೆಗಳ ಕಾಲ ಪ್ರತಿಭಟನೆ ನಡೆಸಿದ್ದರಿಂದ ಶಾಲಾ-ಕಾಲೇಜು ವಿದ್ಯಾರ್ಥಿ ಗಳು ಹಾಗೂ ಪ್ರಯಾಣಿಕರು ಪರದಾಡುವಂತಾಯಿತು.

ನಂತರ ಕಲಬುರಗಿ ಸಹಾಯಕ ಆಯುಕ್ತೆ ಸಾಹಿತ್ಯ ಆಲದಕಟ್ಟಿ ಅವರಿಗೆ ರೈತರು ಮನವಿ ಸಲ್ಲಿಸಿದರು. ಮನವಿ ಸ್ವೀಕರಿಸಿ ಮಾತನಾಡಿದ ಅವರು, ಯಾವುದೇ ಕಾರಣಕ್ಕೂ ರೈತರಿಗೆ ಅನ್ಯಾಯವಾಗಲು ಬಿಡುವುದಿಲ್ಲ. ಬೆಳೆ ಹಾನಿ ಸಮೀಕ್ಷೆಯ ಪರಿಶೀಲನೆಗಾಗಿ ಜಿಲ್ಲಾಧಿಕಾರಿಗಳು ವಿಶೇಷ ಅಧಿಕಾರಿಗಳ ತಂಡ ರಚಿಸಿದ್ದಾರೆ. ಕ್ರಾಪ್ ಕಟಿಂಗ್‌ನಲ್ಲಿ ಲೋಪದೋಷ ಕಂಡುಬಂದರೆ ರೈತರಿಗೆ ನ್ಯಾಯ ಒದಗಿಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಭರತನೂರ ಚಿಕ್ಕ ಗುರು ನಂಜೇಶ್ವರ ಮಹಾಸ್ವಾಮಿಗಳು, ಮಾಜಿ ಸಂಸದ ಡಾ.ಉಮೇಶ ಜಾಧವ, ರೈತ ಸಂಘ ಹಾಗೂ ರೈತ ಸೇನೆ ತಾಲೂಕಾಧ್ಯಕ್ಷ ವೀರಣ್ಣ ಗಂಗಾಣಿ, ಶರಣಬಸಪ್ಪ ಮಮಶೆಟ್ಟಿ, ಶಿವರಾಜ ಪಾಟೀಲ ಗೋಣಗಿ, ಮಲ್ಲಿಕಾರ್ಜುನ ಪಾಟೀಲ ರುದನೂರ, ಮೋಹನ ಚಿನ್ನ, ಸುಂದರ ಸಾಗರ ಮಾತನಾಡಿದರು.

ಸೂಗುರ ಪೂಜ್ಯ ಡಾ. ಚನ್ನರುದ್ರಮುನಿ ಶಿವಾಚಾರ್ಯರರು, ರಟಕಲ್ ಪೂಜ್ಯ ನೀಲಕಂಠ ಮಹಾಸ್ವಾಮಿಗಳು, ಮಂಗಲಗಿ ಡಾ. ಶಾಂತಸೋಮನಾಥ ಶಿವಾಚಾರ್ಯರು, ರಾಯಕೊಡ ಪೂಜ್ಯ ಪ್ರಶಾಂತ ದೇವರು, ಕೋಡ್ಲಿ ಪೂಜ್ಯ ಬಸವಲಿಂಗ ಶಿವಾಚಾರ್ಯರು, ಹೊಸ್ಸಳ್ಳಿ ಪೂಜ್ಯ ಸಿದ್ಧಲಿಂಗ ಶಿವಾಚಾರ್ಯರರು, ರುಮ್ಮನಗುಡ ಏಕನಾಥ ಮಹಾರಾಜ, ಸೋಮಶೇಖರ ಚಿಂಚೋಳಿ, ಜಗದೀಶ್ ಮಾಲಿಪಾಟೀಲ ಸೇರಿದಂತೆ ತಾಲೂಕಿನ ವಿವಿಧ ಹಳ್ಳಿಗಳಿಂದ ಸಾವಿರಾರು ರೈತರು ಪ್ರತಿಭಟನೆಯಲ್ಲಿ ಹಾಜರಿದ್ದರು.

ಕೈಗಾರಿಕಾ ಮಾಲಿನ್ಯ ಖಂಡಿಸಿ ಹುಮನಾಬಾದ್‌ನಲ್ಲಿ ರಸ್ತೆ ತಡೆದು ಪ್ರತಿಭಟನೆ; ಶಾಶ್ವತ ಪರಿಹಾರಕ್ಕೆ ಆಗ್ರಹ

ಹುಮನಾಬಾದ್,ಆ.12-

ಪಟ್ಟಣದ ಹೊರವಲಯದಲ್ಲಿರುವ ಕೈಗಾರಿಕಾ ಪ್ರದೇಶದಿಂದ ಜನಜೀವನಕ್ಕೆ ಹಾನಿಯಾಗುತ್ತಿದೆ ಎಂದು ಆರೋಪಿಸಿ ಹಾಗೂ ಮಾಲಿನ್ಯ ಉಂಟುಮಾಡುತ್ತಿರುವ ಕಂಪನಿಗಳ ವಿರುದ್ಧ ಕ್ರಮ ಕೈಗೊಂಡು ಸ್ವಚ್ಛ ಮತ್ತು ಆರೋಗ್ಯಕರ ವಾತಾವರಣ ನಿರ್ಮಿಸಬೇಕು ಎಂದು ಆಗ್ರಹಿಸಿ ಮಾಣಿಕನಗರದ ಆನಂದ ರಾಜ್ ಮಹಾರಾಜ್ ಅವರ ನೇತೃತ್ವದಲ್ಲಿ ಮಂಗಳವಾರ ಹುಮನಾಬಾದ್-ಕಲಬುರಗಿ ಮುಖ್ಯ ರಸ್ತೆ ತಡೆದು ಪ್ರತಿಭಟನೆ ನಡೆಸಲಾಯಿತು.



ಕೈಗಾರಿಕಾ ಪ್ರದೇಶದ ಸಮೀಪದ ಮುಖ್ಯ ರಸ್ತೆಯಲ್ಲಿ ಬೆಳಿಗ್ಗೆಯಿಂದ ಮಧ್ಯಾಹ್ನ 3 ಗಂಟೆಯವರೆಗೆ ಪ್ರತಿಭಟನೆ ನಡೆಯಿತು. ಪ್ರತಿಭಟನಾಕಾರರು ರಾಸಾಯನಿಕ ಕಾರ್ಖಾನೆಗಳನ್ನು ಬಂದ್ ಮಾಡಬೇಕು ಎಂದು ಘೋಷಣೆ ಕೂಗಿದರು. ರಸ್ತೆ ತಡೆ ಹಿನ್ನೆಲೆಯಲ್ಲಿ ಕೆಲಕಾಲ ವಾಹನ ಸಂಚಾರ ಸಂಪೂರ್ಣ ಸ್ಥಗಿತಗೊಂಡಿತ್ತು.

ಕೈಗಾರಿಕಾ ಪ್ರದೇಶದ ಕಾರ್ಖಾನೆಗಳಿಂದ ವಾಯು ಹಾಗೂ ಜಲಮಾಲಿನ್ಯ ಉಂಟಾಗುತ್ತಿದ್ದು, ಇದರಿಂದ ಜನಜೀವನ ಅಸ್ತವ್ಯಸ್ತವಾಗಿದೆ. ಚರ್ಮರೋಗ ಸೇರಿದಂತೆ ವಿವಿಧ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಮಾಣಿಕನಗರದ ಗುರುಗಂಗೆ ಹಳ್ಳವೂ ಮಾಲಿನ್ಯದಿಂದ ಹಾಳಾಗಿದ್ದು, ಹಿಂದೆ ಭಕ್ತರು ಸ್ನಾನ ಮಾಡುತ್ತಿದ್ದ ಈ ಹಳ್ಳದಲ್ಲಿ ಇದೀಗ ನೀರಿನ ಗುಣಮಟ್ಟ ಹದಗೆಟ್ಟಿದೆ. ಮಾಲಿನ್ಯದಿಂದ ಕೃಷಿಗೂ ತೊಂದರೆಯಾಗುತ್ತಿದ್ದು, ರೈತರ ಬೆಳೆಗಳ ಮೇಲೂ ಪರಿಣಾಮ ಬೀರುತ್ತಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ನಿರಂತರ ಹೋರಾಟಗಳ ಹಿನ್ನೆಲೆಯಲ್ಲಿ ಈಗಾಗಲೇ ಮೂರು ಕಂಪನಿಗಳನ್ನು ಬಂದ್ ಮಾಡುವಂತೆ ಆದೇಶ ಹೊರಡಿಸಲಾಗಿದೆ. ಆದರೆ, ಇನ್ನೂ ಕೆಲವು ಕಂಪನಿಗಳಿಂದ ಜನಜೀವನಕ್ಕೆ ಹಾನಿಯಾಗುತ್ತಿದೆ. ಅಂತಹ ಘಟಕಗಳ ವಿರುದ್ಧವೂ ಸೂಕ್ತ ಕ್ರಮ ಕೈಗೊಂಡು ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಶಾಶ್ವತ ಪರಿಹಾರಕ್ಕೆ ಸಚಿವರ ಭರವಸೆ : ಸಚಿವ ಈಶ್ವರ ಖಂಡ್ರೆ, ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಪ್ರತಿಭಟನಾಕಾರರೊಂದಿಗೆ ಮಾತುಕತೆ ನಡೆಸಿ, ಹುಮನಾಬಾದ್ ಕ್ಷೇತ್ರದ ಜನರಿಗೆ ನ್ಯಾಯ ದೊರಕಿಸಿಕೊಡುವ ಭರವಸೆ ನೀಡಿದರು.

ವಿಧಾನ ಪರಿಷತ್ ಸದಸ್ಯ ಭೀಮರಾವ್ ಪಾಟೀಲ್ ಮಾತನಾಡಿ, ''ಪ್ರತಿಸಲ ಕಾರ್ಖಾನೆಗಳನ್ನು ಬಂದ್ ಮಾಡಲಾಗುತ್ತದೆ. ಆದರೆ ಕೆಲವೇ ದಿನಗಳಲ್ಲಿ ಮತ್ತೆ ಅವು ಕಾರ್ಯಾರಂಭಿಸುತ್ತವೆ. ಇದರಿಂದ ಜನಪ್ರತಿನಿಧಿಗಳ ಮೇಲಿನ ಜನರ ನಂಬಿಕೆ ಕಳೆದುಕೊಳ್ಳುವಂತಾಗಿದೆ. ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು. ಇಲ್ಲವಾದರೆ ನನ್ನ ಇನ್ನೂ ಒಂದೂವರೆ ವರ್ಷ ಬಾಕಿ ಇರುವ ವಿಧಾನ ಪರಿಷತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ'' ಎಂದು ಸಚಿವ ಈಶ್ವರ ಖಂಡ್ರೆ ಅವರಿಗೆ ಎಚ್ಚರಿಕೆ ನೀಡಿದರು.

ಈ ವೇಳೆ ಮಾಜಿ ಸಚಿವ ರಾಜಶೇಖರ್ ಪಾಟೀಲ್, ವಿಧಾನ ಪರಿಷತ್ ಸದಸ್ಯ ಚಂದ್ರಶೇಖರ್ ಪಾಟೀಲ್, ಯುವ ಕ್ರಾಂತಿ ಸಂಘಟನೆ ರಾಜ್ಯಧ್ಯಕ್ಷ ಗುಂಡು ರೆಡ್ಡಿ, ಆಪ್ ಪಕ್ಷದ ಮುಖಂಡ ಬ್ಯಾಂಕ್ ರೆಡ್ಡಿ ಬೆಂಬಲ ಸೂಚಿಸಿದರು. ಪ್ರತಿಭಟನೆಯಲ್ಲಿ ಹುಮನಾಬಾದ್, ಗಡವಂತಿ, ಮಾಣಿಕನಗರ, ಹುಡಗಿ ಸೇರಿದಂತೆ ಸುತ್ತಲಿನ ಹಲವಾರು ಹಳ್ಳಿಗಳ ಸಾವಿರಾರು ಗ್ರಾಮಸ್ಥರು ಭಾಗವಹಿಸಿದ್ದರು.

ಸರ್ಕಾರಿ ಕಾರ್ಯಕ್ರಮಗಳ ಅನುಷ್ಠಾನ ಮತ್ತು ಗುಣಮಟ್ಟದ ಜನಸೇವೆಗೆ ಜಿಲ್ಲಾಧಿಕಾರಿ ಕೆ. ನಾಗೇಂದ್ರ ಪ್ರಸಾದ್ ಕಟ್ಟುನಿಟ್ಟಿನ ಸೂಚನೆ

ಬಳ್ಳಾರಿ,ಆ.12-

ರಾಜ್ಯ ಸರ್ಕಾರದ ವಿನೂತನ ಯೋಜನೆಗಳಾದ ಪ್ರಜಾಸೇವೆ', ಭಾರತ್ ಜೋಡೋ ಸಂಘಗಳ ರಚನೆ ಹಾಗೂ ಮಾದಕ ದ್ರವ್ಯ ವಿರೋಧಿ ಜಾಗೃತಿ ಮತ್ತು ಕಾರ್ಯಾಚರಣೆ ಅಭಿಯಾನಗಳಾದ ಬೇಡ ಬ್ರೋ' ಮತ್ತು ಆಪರೇಷನ್ ರೈಸ್' ಕಾರ್ಯಕ್ರಮಗಳನ್ನು ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ಜಿಲ್ಲಾಧಿಕಾರಿ ಕೆ. ನಾಗೇಂದ್ರ ಪ್ರಸಾದ್ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.



ಮಂಗಳವಾರ, ಮುಖ್ಯಮಂತ್ರಿಯವರ ಕರ್ನಾಟಕ ಸರ್ಕಾರ ನೌಕರರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ, ಬಳಿಕ ನಗರದ ಜಿಪಂ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳನ್ನುದ್ದೇಶಿಸಿ ಅವರು ಮಾತನಾಡಿದರು.

ಪ್ರತಿ ತಿಂಗಳ ಮೊದಲ ಮತ್ತು ಮೂರನೇ ಶನಿವಾರದಂದು ತಾಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಪ್ರಜಾಸೇವೆ' ಆಂದೋಲನವನ್ನು ಕಡ್ಡಾಯವಾಗಿ ಆಯೋಜಿಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

ಗುಣಮಟ್ಟದ ದೂರು ವಿಲೇವಾರಿಗೆ ಆದ್ಯತೆ: ಮುಖ್ಯಮಂತ್ರಿಗಳ ಆಶಯದಂತೆ ಸಾರ್ವಜನಿಕರ ಅರ್ಜಿಗಳನ್ನು ಕೇವಲ ಮೇಲಾಧಿಕಾರಿಗಳಿಗೆ ಫಾರ್ವರ್ಡ್ ಮಾಡಿ ಕ್ಲೋಸ್ ಮಾಡುವುದರಿಂದ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ. ಸಾರ್ವಜನಿಕರ ಕುಂದುಕೊರತೆಗಳಿಗೆ ನೈಜ ಹಾಗೂ ಗುಣಮಟ್ಟದ ಪರಿಹಾರ ನೀಡಿ ಅರ್ಜಿಗಳನ್ನು ವಿಲೇವಾರಿ ಮಾಡಬೇಕು. ಈ ಆಂದೋಲನ ನಡೆಯುವ ಶನಿವಾರಗಳಂದು ಜಿಲ್ಲಾಧಿಕಾರಿಗಳು ಸೇರಿದಂತೆ ಎಲ್ಲಾ ತಾಲೂಕು ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ತಮ್ಮ ಕೇಂದ್ರ ಸ್ಥಾನದಲ್ಲಿಯೇ ಉಪಸ್ಥಿತರಿರಬೇಕು ಎಂದರು.

ಇಲಾಖೆಗಳ ಜಂಟಿ ಸಮೀಕ್ಷೆ ಮತ್ತು ತ್ವರಿತ ಪೂರ್ಣ: ಕಂದಾಯ ಮತ್ತು ನಗರಾಭಿವೃದ್ಧಿ ಇಲಾಖೆಗಳು ಜಂಟಿಯಾಗಿ ಎಸ್‌ಐಆರ್ ಪ್ರಕ್ರಿಯೆಯನ್ನು ಕೈಗೆತ್ತಿಕೊಂಡಿದ್ದು, ಈಗಾಗಲೇ ಅಸಂಗತತೆಗಳನ್ನು ಗಣನೀಯವಾಗಿ ಕಡಿಮೆಗೊಳಿಸಲಾಗಿದೆ. ಸಾರ್ವಜನಿಕರಿಂದ ಸ್ವೀಕರಿಸಲಾದ ಫಾರ್ಮ್‌ಗಳಲ್ಲಿನ ದೋಷಗಳನ್ನು ಸರಿಪಡಿಸಲು ಜಂಟಿ ಕ್ರಿಯಾ ಯೋಜನೆ ರೂಪಿಸಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುತ್ತಿದೆ. ಈ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದರು.

ನಶಾ ಮುಕ್ತ ಭಾರತ್ ಅಭಿಯಾನ:

ಗೃಹ ಸಚಿವರ ನಿರ್ದೇಶನದಂತೆ ನಶಾ ಮುಕ್ತ ಭಾರತ್' ಅಭಿಯಾನದಡಿ ಜಿಲ್ಲೆಯಲ್ಲಿ ಆಪರೇಷನ್ ರೈಸ್' ಮತ್ತು ಬೇಡ ಬ್ರೋ' ಎಂಬ ಎರಡು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅಬಕಾರಿ ಇಲಾಖೆ, ಪೊಲೀಸ್ ಇಲಾಖೆ ಹಾಗೂ ಸಂಬಧಪಟ್ಟ ಇತರ ಇಲಾಖೆಗಳು ಜಂಟಿಯಾಗಿ ಈ ಕಾರ್ಯಕ್ರಮದಡಿ ಅತ್ಯುತ್ತಮ ಸಾಧನೆ ಮಾಡಿದ್ದು, ಇದನ್ನು ಮುಂಬರುವ ದಿನಗಳಲ್ಲಿ ಮತ್ತಷ್ಟು ಕ್ರಿಯಾಶೀಲವಾಗಿ ಮುಂದುವರಿಸಬೇಕು ಎಂದು ನಿರ್ದೇಶನ ನೀಡಿದರು.

ಅಧಿಕಾರಿಗಳು ಕೇವಲ ತಮ್ಮ ಇಲಾಖೆಗೆ ಮಾತ್ರ ಸೀಮಿತವಾಗದೆ, ಉತ್ತಮ ಭಾವನೆಯಿಂದ ಕೆಲಸ ಮಾಡಬೇಕಿದೆ. ಸಾರ್ವಜನಿಕರ ಹಿತದೃಷ್ಟಿಯಿಂದ ನೀಡಲಾಗುವ ಯಾವುದೇ ಹೆಚ್ಚುವರಿ ಜವಾಬ್ದಾರಿಗಳನ್ನು ವಹಿಸಿಕೊಳ್ಳಲು ಮನೋಭಾವನೆಯನ್ನು ಹೊಂದಿರಬೇಕು. ಇಲಾಖೆಗಳ ನಡುವಿನ ಸಮನ್ವಯತೆಯಿಂದ ಜಿಲ್ಲೆಯಾದ್ಯಂತ ಉತ್ತಮ ಆಡಳಿತ ನೀಡಲು ಅಧಿಕಾರಿಗಳು ಒಗ್ಗಟ್ಟಿನಿಂದ ಶ್ರಮಿಸಬೇಕೆಂದು ಕರೆ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್, ಬಳ್ಳಾರಿ ವಲಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಕೆ. ಎನ್. ಬಸವರಾಜ್, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್.ಝುಬೇರ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ಉದ್ಯಮಗಳ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಳ್ಳಿ: ಜಿ.ಯು.ಹುಡೇದ್

ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಮತಿ ಇಂದಿರಾ, ಜಿಲ್ಲಾ ಕೈಗಾರಿಕಾ ಕೇಂದ್ರ, ರಾಯಚೂರು, ಉದ್ಯೋಗ ಕೋಶದ ಸಂಚಾಲಕರಾದ ಶ್ರೀ ರಂಗನಾಥ ಬಿಲ್ಲಾದ, ಡಾ ಜ್ಯೋತಿ ಐಕ್ಯೂಎಸಿ ಸಂಚಾಲಕರು, ಪ್ರಾಧ್ಯಾಪಕರುಗಳಾದ ಡಾ. ಉಮಾದೇವಿ, ಡಾ. ಆಸ್ಮಾ, ಶರಣೇಗೌಡ ಕೆ ಐಕ್ಯೂಎಸಿ ಸಹ ಸಂಚಾಲಕರು, ಸಂತೋಷ, ವಿಶ್ವನಾಥ ಎಫ್ ಎಲ್ ಸಿ, ಎಸ್ ಬಿ ಐ, ಹಾಗೂ ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸಂಪನ್ಮೂಲ ವ್ಯಕ್ತಿಗಳಾದ ಮನೋಹರ, ಬಜಾರಪ್ಪ ಇವರು ವಂದನಾರ್ಪಣೆ ಮಾಡಿದರು. ಸಭೆಯಲ್ಲಿ ತರಬೇತಿ ಪಡೆದ 65 ಅಭ್ಯರ್ಥಿಗಳು ಹಾಜರಿದ್ದರು.

ಚರ್ಚ್, ದೇವಸ್ಥಾನದ ವಿಚಾರವಾಗಿ ಜಗಳ: 15 ಮಂದಿಗೆ ಗಾಯ, 20 ಮಂದಿ ವಿರುದ್ಧ ಎಫ್ ಐಆರ್

ನೀಡಿ ಪರಿಸ್ಥಿತಿಯನ್ನು ತಿಳಿಗೊಳಿಸಿದ್ದಾರೆ.

ಸ್ವಾತಂತ್ರ್ಯೋತ್ಸವದ ಹಿನ್ನೆಲೆಯಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಚ್ಚಾಲಿ ಗ್ರಾಮ ಹಾಗೂ ಬಿಚ್ಚಾಲಿ ಕ್ಯಾಂಪ್ ಸುತ್ತಮುತ್ತ 100 ಮೀಟರ್ ವ್ಯಾಪ್ತಿಯಲ್ಲಿ ಏಳು ದಿನಗಳ ಕಾಲ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

35ನೇ ವರ್ಷದ ರಾಜೀವ್ ಗಾಂಧಿ ಜ್ಯೋತಿ ಸದ್ಭಾವನಾ ಯಾತ್ರೆ, ಆ.9ರಿಂದ ಆರಂಭ

ರಾಜೀವ್ ಗಾಂಧಿ ಸಂದ್ಭವನಾ ಯಾತ್ರಾ ಸಮಿತಿ ಮುಖಂಡ ಆರ್. ದೊರೈವೇಲು, ಕೆಪಿಸಿಸಿ ಕಾರ್ಮಿಕ ಘಟಕದ ಅಧ್ಯಕ್ಷ ಪುಟ್ಟಸ್ವಾಮಿ ಗೌಡ ಹಾಗೂ ಐಎನ್‌ಟಿಯುಸಿ ಅಧ್ಯಕ್ಷೆ ಲಕ್ಷ್ಮಿ ವೆಂಕಟೇಶ್ ಅವರು ಭಾಗವಹಿಸಿದ್ದರು.

ಈ ನೇತೃತ್ವವನ್ನು ಸೈಯದ್ ಮೋಸಿನ್ ಅವರು ವಹಿಸಿ ಈ ಕಾರ್ಯಕ್ರಮವವನ್ನು ನಗರದಲ್ಲಿ ಆಯೋಜಿಸಿ ಅದ್ದೂರಿಯಾಗಿ ಸ್ವಾಗತಿಸಿಕೊಂಡರು. ನಂತರ ಕಾರ್ಯಕ್ರಮ ಮುಕ್ತಾಯವಾದ ನಂತರ ಯಾತ್ರೆಯನ್ನು ಮುಂದಿನ ನಗರಕ್ಕೆ ಬೀಳ್ಕೊಡುಗೆ ಮಾಡಲಾಯಿತು.

ಅರಗಿನ ಮರ ಕ್ಯಾಂಪ್ ಪುನರ್ ವಸತಿ ಕೇಂದ್ರದಲ್ಲಿ ರಾಷ್ಟ್ರೀಯ ಜಂತು ಹುಳು ನಿವಾರಣ ಕಾರ್ಯಕ್ರಮ

ತೊಳೆದುಕೊಳ್ಳುವುದು. ಹಾಗೂ ಶೌಚಾಲಯ ಬಳಸುವ ಅಭ್ಯಾಸ ಬೆಳೆಸಿಕೊಳ್ಳುವುದು ಅಗತ್ಯ ಎಂದು ಹೇಳಿದರು. ಮಾತ್ರ ಸೇವನೆಯಿಂದ ಮಕ್ಕಳ ಆರೋಗ್ಯ ಸುಧಾರಿಸಿ ಉತ್ತಮ ಬೆಳವಣಿಗೆಗೆ ಸಹಕಾರಿಯಾಗುತ್ತದೆ ಎಂದು ಅವರು ತಿಳಿಸಿದರು. ಈ ಸಂದರ್ಭದಲ್ಲಿ. ಆಶಾ ಕಾರ್ಯಕರ್ತೆಯಾದ. ಲಕ್ಷ್ಮಿ. ಅಂಗನವಾಡಿ ಕಾರ್ಯಕರ್ತರು. ಮಕ್ಕಳ ತಾಯಂದಿರು. ಶಿಕ್ಷಕರು. ಉಪಸ್ಥಿತರಿದ್ದು. ಮಕ್ಕಳಿಗೆ ಜಂತು ಹುಳು ನಿವಾರಣ ಮಾತ್ರ ವಿತರಿಸುವ ಮೂಲಕ ಆರೋಗ್ಯ ಜಾಗೃತಿಯನ್ನು ಮೂಡಿಸಲಾಯಿತು.

ಕಾರುಣ್ಯ ಆಶ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು 79ನೇ ವರ್ಷದ ಜನ್ಮದಿನ ಆಚರಣೆ

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ನವರು ಸರ್ವ ಸಮಾಜದ ಸಮಾನತೆಯ ಹರಿಕಾರು :ಕೆ.ಲಿಂಗರಾಜ ಹೊಸಳ್ಳಿ

ಕಾರ್ಯವಾಗಿದೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆದರ್ಶದ ಜೀವನವೇ ನಮಗೆ ಸ್ಫೂರ್ತಿ ಕೆಳ ಹಂತದಿಂದ ಹಲವಾರು ಹೋರಾಟಗಳ ಮೂಲಕ ನಮ್ಮ ರಾಜ್ಯದಲ್ಲಿ ಅತಿ ಹೆಚ್ಚು ಅಧಿಕಾರ ನೀಡಿ ರಾಜ್ಯದ ಏಳಿಗೆಗೆ ಕಾರಣರಾದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಕ್ರಿಯವಾಗಿ ರಾಜಕಾರಣದಲ್ಲಿ ನಿರಂತರವಾಗಿರುತ್ತಾರೆ. ಅವರ ಈ ಜನ್ಮದಿನದಂದು ಕಾರುಣ್ಯ ಆಶ್ರಮದಲ್ಲಿರುವ ಎಲ್ಲಾ ದೇವರುಗಳ ಸಮಸ್ತ ನಾಡಿನ ದೇಶದ ಜನರು ಅವರನ್ನು ಹರಸಿ ಹಾರೈಸಿ ಆಶೀರ್ವದಿಸುತ್ತಿದ್ದಾರೆ. ಅವರ ಆದರ್ಶದಂತೆ ಕಾರುಣ್ಯ ಆಶ್ರಮದ ಸೇವೆಯು ಕೂಡ ರಾಜ್ಯದ ಸರ್ವ ಸಮಾಜದ ಜನರ ಪ್ರೀತಿಗೆ ಪಾತ್ರವಾಗಿದೆ. ಈ ಆಶ್ರಮದಲ್ಲಿರುವವರು ಅನಾಥರಲ್ಲ ಇವರೆಲ್ಲರಿಗೂ ತನ್ನ ಜೋಳಿಗೆಯ ಮೂಲಕ ಪ್ರೀತಿ ಹಂಚುತ್ತಿರುವ ಚನ್ನಬಸವ ಸ್ವಾಮಿ ನಮ್ಮ ಕರುನಾಡಿನ ಕರುಣಾಮಯಿಗಳಾಗಿದ್ದಾರೆ. ಇಂತಹ ಒಂದು ಪುಣ್ಯಭೂಮಿಯಲ್ಲಿ ನಮ್ಮ ಸಿದ್ದರಾಮಯ್ಯನವರ ಜನ್ಮದಿನ ಅರ್ಥಪೂರ್ಣ ಎಂದು ಮಾತನಾಡಿದರು. ನಂತರ ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ಸಮಿತಿಯ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಡಾ. ನಾಗವೇಣಿ.ಎಸ್. ಪಾಟೀಲ್ ಮಾತನಾಡಿ ನಮ್ಮ ನೆಚ್ಚಿನ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪ್ರತಿಯೊಂದು ಕ್ಷೇತ್ರದಲ್ಲಿ ಅಭೂತಪೂರ್ವ ಕೊಡುಗೆ ನೀಡಿದ್ದಾರೆ. ಅವರ ಇಂದಿನ ಈ ಜನ್ಮದಿನ ಕಾರ್ಯಕ್ರಮದಲ್ಲಿ ಅವರಿಗೆ ಮತ್ತು ಅವರ ಕುಟುಂಬಕ್ಕೆ ಆಯಸ್ಸು ಆಯುರಾರೋಗ್ಯ ಸುಖ ಶಾಂತಿ ನೆಮ್ಮದಿ ದೊರೆಯಲಿ ಎನ್ನುವ ವಿಶೇಷ ಪ್ರಾರ್ಥನೆಯೊಂದಿಗೆ ನಾವೆಲ್ಲರೂ ಅವರ ಜನ್ಮ ದಿನದಲ್ಲಿ ಶುಭ ಕೋರುತ್ತಿದ್ದೇವೆ ಎಂದು ಮಾತನಾಡಿದರು. ನಂತರ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಅಖಿಲ ಕರ್ನಾಟಕ ಎಸ್. ಸಿದ್ದರಾಮಯ್ಯ ಅಭಿಮಾನಿ ಬಳಗದ ಸಿಂಧನೂರು ತಾಲೂಕಾಧ್ಯಕ್ಷರಾದ ಕೆ. ಲಿಂಗರಾಜ ಹೊಸಳ್ಳಿ ಮಾತನಾಡಿ ನಮ್ಮ ನೆಚ್ಚಿನ ನಾಯಕರು ಕರುನಾಡಿನ ಕರುಣಾಮಯಿಗಳಾದ ನಮ್ಮೆಲ್ಲರಿಗೆ ಆದರ್ಶ ಪ್ರಿಯರಾದ ಎಸ್. ಸಿದ್ದರಾಮಯ್ಯ ಸಾಹೇಬರಿಗೆ ಜನ್ಮದಿನದ ಶುಭಾಶಯಗಳು. ಸರ್ವ ಸಮಾಜದ ಸಮಾನತೆಯ ಹರಿಕಾರರಾದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪ್ರಾಮಾಣಿಕ ರಾಜಕಾರಣಿಗಳು ಅವರ ಹಲವಾರು ಯೋಜನೆಗಳು ಅವರ ಸಾಧನೆಗಳು ಅವರ ಶಕ್ತಿ ರಾಷ್ಟ್ರ ರಾಜಕಾರಣಕ್ಕೆ ಮಾರ್ಗದರ್ಶಕವಾಗಿದೆ. ಇಂದು ಅವರ ಜನ್ಮದಿನದ ಶುಭ ಸಂದರ್ಭದಲ್ಲಿ ಆಶ್ರಮದಲ್ಲಿನ ಎಲ್ಲ ಹಿರಿಯರ ಆಶೀರ್ವಾದ ಮತ್ತು ವಯಸ್ಕರ ಬುದ್ಧಿಮಾಂದ್ಯರ ಹಾಗೂ ನಾಡಿನ ಜನರ ಆಶೀರ್ವಾದ ನಮ್ಮ ಸಾಹೇಬರ ಮೇಲಿರಲಿ ಎಂದು ಮಾತನಾಡಿ ಸಿದ್ದರಾಮಯ್ಯ ಅವರ ಹಲವಾರು ಸಾಧನೆಗಳ ಬಗ್ಗೆ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಕೆ. ಲಿಂಗರಾಜ ಹೊಸಳ್ಳಿ ಅಧ್ಯಕ್ಷರು ಅಖಿಲ ಕರ್ನಾಟಕ ಎಸ್. ಸಿದ್ದರಾಮಯ್ಯ ಅಭಿಮಾನಿ ಬಳಗ ಸಿಂಧನೂರು. ನಿರುಪಾದೆಪ್ಪ ಗುಡಿಹಾಳ ವಕೀಲರು ಸಿಂಧನೂರು.ಡಾ. ನಾಗವೇಣಿ. ಎಸ್. ಪಾಟೀಲ್ ಕಾರ್ಯದರ್ಶಿಗಳು ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ಸಮಿತಿ. ಚಿದಾನಂದಪ್ಪ ವಕೀಲರು ಹೊಸಳ್ಳಿ. ಕೆ.ಚಂದ್ರಕಲಾ ಹೊಸಳ್ಳಿ. ಅಂಬಣ್ಣ ಸಾಸಲಮರಿ ಪತ್ರಕರ್ತರು ಸಿಂಧನೂರು. ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಹರೇಟನೂರು. ಸದಸ್ಯರಾದ ಸುಜಾತ ಹಿರೇಮಠ. ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ. ಮರಿಯಪ್ಪ. ಜ್ಯೋತಿ.ಮಹಾಂತೇಶ ದೋಟಿಹಾಳ.ಬಸವಸ್ವಾಮಿ. ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಎಸ್.ಸಿದ್ದರಾಮಯ್ಯ ಅವರ ಹಲವಾರು ಅಭಿಮಾನಿಗಳು ಉಪಸ್ಥಿತರಿದ್ದರು

ಕಾಲುವೆಗೆ ನೀರು ಹರಿಸಿ ಎಂದು ಹಕ್ಕೊತ್ತಾಯ ಮಾಡಿದ ಕೊಪ್ಪಳ, ವಿಜಯನಗರ, ಬಳ್ಳಾರಿ, ರಾಯಚೂರು ಜಿಲ್ಲೆಗಳ ರೈತ ಮುಖಂಡರು



ಕೊಪ್ಪಳ ಆ.12-

ಮುನಿರಾಬಾದ್‌ನ ಕಾಡಾ ಟಿ.ಬಿ.ಪಿ. ಸಭಾಂಗಣದಲ್ಲಿ ಆಗಸ್ಟ್ 11ರಂದು ನಿಗದಿಯಾದ ತುಂಗಭದ್ರಾ ಯೋಜನೆ ಮತ್ತು ವಿಜಯನಗರ ಕಾಲುವೆಗಳ 126ನೇ ನೀರಾವರಿ ಸಲಹಾ ಸಮಿತಿ ಸಭೆಯ ಪೂರ್ವದಲ್ಲಿ ಸಚಿವರಾದ ಶಿವರಾಜ ತಂಗಡಗಿ ಅವರು ರೈತ ಮುಖಂಡರ ಸಲಹೆ ಪಡೆದುಕೊಂಡರು.

ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಹನುಮನಗೌಡ ಬೆಳಗುರ್ಕಿ, ರೈತ ಮುಖಂಡರಾದ ಚಾಮರಸ ಪಾಟೀಲ, ಶರಣಪ್ಪಗೌಡ್ರ, ಶಂಕರಗೌಡ್ರ, ಸೇರಿದಂತೆ ಕೊಪ್ಪಳ, ವಿಜಯನಗರ, ಬಳ್ಳಾರಿ ಹಾಗೂ ರಾಯಚೂರು ಜಿಲ್ಲೆಗಳ ಅನೇಕ ರೈತ ಮುಖಂಡರು ಮಾತನಾಡಿ, ಕಾಲುವೆ ತಕ್ಷಣವೇ ನೀರು ಹರಿಸಬೇಕು ಎಂಬ ಹಕ್ಕೊತ್ತಾಯ ಮಾಡಿದರು. ಸಭೆಗೆ ಕೆಲವು ಮಹತ್ವದ ಸಲಹೆಗಳನ್ನು ನೀಡಿದರು.

ಕುಡಿವ ನೀರಿಗೆ ಬೇಕಾಗುವಷ್ಟು ನೀರು ಇಟ್ಟುಕೊಂಡೇ, ಬೆಳೆಗಳಿಗಾಗಿ ಕಾಲುವೆಗೆ ನೀರು ಹರಿಸಲು ಇಂದೇ ನಿರ್ಣಯಿಸಬೇಕು ಎಂದು ಒಕ್ಕೊರಲಿನ ಮನವಿ ಮಾಡಿದರು. ತುಂಗಭದ್ರಾ ಜಲಾಶಯದಲ್ಲಿ ನೀರು ಲಭ್ಯತೆ ಇದೆ. ಈಗ 82 ಟಿಎಂಸಿ ಶೇಖರಣೆಯಾಗಿದ್ದು ಜಮೀನದಲ್ಲಿನ ಬೆಳೆಗಳಿಗೆ ನೀರು ಕೇಳುತ್ತಿದ್ದೇವೆ. ಬೇಗನೆ ಕಾಲುವೆಗೆ ನೀರು ಹರಿಸಬೇಕು. ಭತ್ತ ಮೆಣಸಿನಕಾಯಿ ಸಸಿಗಳ ನರ್ಸರಿ ಹಾಳಾಗುತ್ತಿದೆ. ಗೊಬ್ಬರ ಮತ್ತು ಬೀಜ ದಾಸ್ತಾನು ಇದೆ. ನೀರು ಬಿಡದೇ ಕಂಗಾಲಾ ಗಿದ್ದೇವೆ. 50 ಟಿಎಂಸಿ ನೀರು ಬಂದಾಗಲೇ ನೀರ ಬಿಡಬೇಕಿತ್ತು. ನೀರು ಇಲ್ಲದೆ ತೊಗರಿ, ಹತ್ತಿ, ಮೆಣಸಿನ ಬೆಳೆಗಳು ಒಣಗಿವೆ. ಸಾವು ಮತ್ತು ಬದುಕಿನ ಮಧ್ಯೆ ರೈತರಿದ್ದಾರೆ.

ಗೇಟಗಳಿಗೆ ಹಾಕಿದ ಅಳತೆ ಪಟ್ಟಿ ತಪ್ಪಿದೆ. ಅದನ್ನು ಸರಿಪಡಿಸಬೇಕು ಎಂದು ರೈತರು ಮನವಿ ಮಾಡಿದರು. ಪ್ರತಿ ಕಾಲುವೆಗೆ ಅಧಿಕಾರಿಗಳನ್ನು ನಿಯೋಜಿಸಬೇಕು. ಕ್ಯಾನಲಗಳ ದುರಸ್ತಿ ಕಾರ್ಯ ಸಮರ್ಪಕವಾಗಿ ಆಗದೇ ನೀರು ಪೋಲಾಗುತ್ತಿದೆ. ಕಳೆದ ನಾಲ್ಕು ವರ್ಷಗಳ ಹಿಂದೆ ಆರಂಭಿಸಿದ ಆನ್ ಅಫ್ ಪದ್ಧತಿ ಕೈಬಿಟ್ಟು ಕಾಲುವೆಗೆ ನಿರಂತರ ನೀರು ಹರಿಸಿ ಎಂದು ರೈತರು ಒತ್ತಾಯಿಸಿದರು.

ಕಾಲುವೆಗಳಿಗೆ ಸಂಬಂಧಿಸಿದ ಎಂಜಿನಿಯರ್ಸ ಕೊರತೆ ತಪ್ಪಿಸಬೇಕು. ಕಾಲುವೆಗಳಿಂದ ಅಕ್ರಮವಾಗಿ ನೀರು ತೆಗೆಯುವ ಪದ್ಧತಿಗೆ ಕಡಿವಾಣ ಹಾಕಬೇಕು. 2008ರಲ್ಲಿ ಕಾಲುವೆಗಳ ದುರಸ್ತಿ ಮಾಡಿದ್ದು ಬಿಟ್ಟರೆ ಇದುವರೆಗೆ ಮತ್ತೆ ಕಾಲುವೆಗಳ ದುರಸ್ತಿ ಕಾರ್ಯ ಮಾಡಿಲ್ಲ. ಬಲದಂಡೆ ಎಡದಂಡೆ ಸೇರಿದಂತೆ ಎಲ್ಲ ಕಾಲುವೆಗಳ ದುರಸ್ತಿ ಕಾರ್ಯ ಕೂಡ ನಡೆಯಬೇಕು ಎಂದು ರೈತ ಮುಖಂಡರು ಒತ್ತಾಯಿಸಿದರು.

ಕೊಪ್ಪಳ, ರಾಯಚೂರು, ವಿಜಯನಗರ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಕುಡಿವ ನೀರಿಗಾಗಿ ಈ ಭಾಗದ ಎಲ್ಲ ಕೆರೆಗಳನ್ನು ಕೂಡಲೆ ತುಂಬಿಸಬೇಕು ಎಂದು ರೈತರು ಒತ್ತಾಯಿಸಿದರು.

ಪ್ರತ್ಯೇಕ ಸಭೆಗೆ ಏರ್ಪಾಡು ಮಾಡಿ:★ ಟಿಬಿ ಡ್ಯಾಮನ ಎಲ್ಲ ಕಾಲುವೆಗಳಿಗೆ ಸಕಾಲಕ್ಕೆ ನೀರು ಬಿಡುವುದು, ಕಾಲುವೆ ದುರಸ್ತಿ ಮಾಡುವುದು ಸೇರಿದಂತೆ ನಾನಾ ವಿಷಯಗಳ ಚರ್ಚೆಗೆ ಜಲ ಸಂಪನ್ಮೂಲ ಸಚಿವರು ಮತ್ತು ಈ ಭಾಗದ ಸಚಿವರು ಹಾಗೂ ಎಲ್ಲ ಶಾಸಕರು, ರೈತ ಮುಖಂಡರ ಸಮ್ಮುಖದಲ್ಲಿ ಒಂದು ಪ್ರತ್ಯೇಕ ಸಭೆಗೆ ಏರ್ಪಾಡು ಮಾಡಬೇಕು ಎಂದು ರೈತ ಮುಖಂಡರಾದ ಚಾಮರಸ ಪಾಟೀಲ ಅವರು ಸಭೆಗೆ ಒತ್ತಾಯಿಸಿದರು.

ಸಭೆಯಲ್ಲಿ ಶಾಸಕರಾದ ಕೆ ರಾಘವೇಂದ್ರ ಹಿಟ್ನಾಳ, ಬಸನಗೌಡ ದದ್ದಲ್, ಹಂಪನಗೌಡ ಬಾದರ್ಲಿ,

ಜಿ.ಹಂಪಯ್ಯ ನಾಯಕ, ಬಸನನಗೌಡ ತುರವಿಹಾಳ, ಡಾ.ಎಸ್.ಶಿವರಾಜ ಪಾಟೀಲ, ಅನ್ನಪೂರ್ಣ ತುಕಾರಾಮ, ಜೆ ಎನ್ ಗಣೇಶ, ವಿಧಾನ ಪರಿಷತ್ ಶಾಸಕರಾದ ಬಸನಗೌಡ ಬಾದರ್ಲಿ, ಕಾಡಾ ಅಧ್ಯಕ್ಷರಾದ ಹಸನಸಾಬ ನಬಿಸಾಬ ದೋಟಿಹಾಳ, ಮುಖಂಡರಾದ ಎನ್ ಎಸ್ ಬೋಸರಾಜು, ಅಧಿಕಾರಿ ಸದಸ್ಯರಾದ ವಿವಿಧ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಕರ್ನಾಟಕ ನೀರಾವರಿ ನಿಗಮ ನಿಯಮಿತದ ಎಂಜಿನಿಯರ್ ಮನೋಜಕುಮಾರ ಗಡಬಳ್ಳಿ, ಮುನಿರಾಬಾದನ ತುಂಗಭದ್ರಾ ಯೋಜನೆ ವೃತ್ತ ಅಧೀಕ್ಷಕ ಅಭಿಯಂತರರಾದ ಎಸ್ ಬಿ ಮಲ್ಲಿಗವಾಡ, ಯರಮರಸನ ತುಂಗಭದ್ರಾ ಕಾಲುವೆ ನಿರ್ಮಾಣ ವೃತ್ತದ ಅಧೀಕ್ಷಕ ಅಭಿಯಂತರರಾದ ಸತ್ಯ ನಾರಾಯಾಣ ಶೆಟ್ಟಿ ಹಾಗೂ ಇತರರು ಇದ್ದರು

ಬೈಕ್‌ನಿಂದ ಎಡೆಸಾಗು: ಕೃಷಿಯಲ್ಲಿ ಹೊಸ ಪ್ರಯೋಗಕ್ಕೆ ಮುಂದಾದ ರೈತ



ಆಳಂದ:,ಆ.12-

ಸಾಂಪ್ರದಾಯಿಕ ಕೃಷಿ ಪದ್ಧತಿಗೆ ಬದಲಾಗಿ ಆಧುನಿಕ ತಂತ್ರಜ್ಞಾನ ಹಾಗೂ ಯಾಂತ್ರೀಕರಣದತ್ತ ರೈತರು ಹೆಜ್ಜೆ ಇಡುತ್ತಿರುವ ದೃಶ್ಯ ತಾಲೂಕಿನ ಸಾಲೇಗಾಂವ ವ್ಯಾಪ್ತಿಯಲ್ಲಿ ಭಾನುವಾರ ಕಂಡುಬಂತು.

ಪ್ರಸಕ್ತ ಸಾಲಿನಲ್ಲಿ ಮಳೆಯ ಕೊರತೆಯಿಂದ ತಾಲೂಕಿನಲ್ಲಿ ಶೇ.40ರಿಂದ 50ರಷ್ಟು ಮಾತ್ರ ಬಿತ್ತನೆಯಾಗಿದೆ. ಬಿತ್ತನೆಯಾದ ಪ್ರದೇಶದಲ್ಲೂ ತೇವಾಂಶದ ಕೊರತೆಯಿಂದ ಹಲವು ಬೆಳೆಗಳು ಹಾನಿಗೊಳಗಾಗಿವೆ. ಇತ್ತೀಚೆಗೆ ಸುರಿದ ಮಳೆಯಿಂದ ಕೆಲವೆಡೆ ಅಳಿದುಳಿದ ತೇವಾಂಶದಲ್ಲಿ ಬೆಳೆಗಳು ಚೇತರಿಸಿಕೊಂಡಿದ್ದು, ರೈತರು ಔಷಧಿ ಸಿಂಪಡಣೆ, ಕಳೆ ನಿರ್ವಹಣೆ ಹಾಗೂ ಎಡೆಸಾಗು ಸೇರಿದಂತೆ ವಿವಿಧ ಕೃಷಿ ಚಟುವಟಿಕೆಗಳಲ್ಲಿ ತೊಡಗಿದ್ದಾರೆ.

ಈ ನಡುವೆ ಸಾಲೇಗಾಂವ ಗ್ರಾಮದಲ್ಲಿ ಭಾನುವಾರ ರೈತರೊಬ್ಬರು ಬೈಕ್ ಬಳಸಿ ಬೆಳೆಯಲ್ಲಿ ಎಡೆಸಾಗು ಮಾಡುವ ಮೂಲಕ ಗಮನ ಸೆಳೆದರು.

ಬೆಳೆಯಲ್ಲಿ ಎಡೆಸಾಗು ಮಾಡಲು ಸಾಮಾನ್ಯವಾಗಿ ಎತ್ತುಗಳು ಹಾಗೂ ಇಬ್ಬರಿಂದ ಮೂವರು ಕಾರ್ಮಿಕರ ಅಗತ್ಯವಿರುತ್ತದೆ. ಆದರೆ ಕಾರ್ಮಿಕರ ಕೊರತೆ ಹಾಗೂ ಹೆಚ್ಚುತ್ತಿರುವ ಕೂಲಿ ವೆಚ್ಚದಿಂದಾಗಿ ರೈತರು ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ರೈತ ಮಹಾದೇವಪ್ಪ ಕಂಬಾರ ಅವರು ಮೋಟಾರ್‌ಸೈಕಲ್‌ಗೆ ಕೃಷಿ ಉಪಕರಣವೊಂದನ್ನು ಅಳವಡಿಸಿಕೊಂಡು ತಮ್ಮ ಹೊಲದಲ್ಲಿ ಎಡೆಸಾಗು ಮಾಡಿದರು.

ದಿನಕ್ಕೆ 6 ಎಕರೆ ಎಡೆಸಾಗು :

ಎತ್ತುಗಳ ಮೂಲಕ ದಿನಕ್ಕೆ ಸುಮಾರು 2 ಎಕರೆ ಪ್ರದೇಶದಲ್ಲಿ ಎಡೆಸಾಗು ಮಾಡಬಹುದಾದರೆ, ಮೋಟಾರ್‌ಸೈಕಲ್ ಬಳಸಿ ದಿನಕ್ಕೆ ಸುಮಾರು 6 ಎಕರೆ ಪ್ರದೇಶದಲ್ಲಿ ಎಡೆಸಾಗು ಮಾಡಬಹುದಾಗಿದೆ. ಇದರಿಂದ ಸಮಯ ಹಾಗೂ ವೆಚ್ಚ ಎರಡನ್ನೂ ಉಳಿತಾಯ ಮಾಡಬಹುದು ಎಂದು ರೈತ ಮಹಾದೇವಪ್ಪ ಕಂಬಾರ ತಿಳಿಸಿದರು.

ಕೃಷಿ ಕಾರ್ಮಿಕರ ಕೊರತೆ, ಹೆಚ್ಚುತ್ತಿರುವ ಕೂಲಿ ವೆಚ್ಚ ಹಾಗೂ ಸಮಯದ ಅಭಾವದ ಹಿನ್ನೆಲೆಯಲ್ಲಿ ಸಣ್ಣ ಮತ್ತು ಮಧ್ಯಮ ರೈತರು ಸ್ಥಳೀಯವಾಗಿ ಲಭ್ಯವಿರುವ ತಂತ್ರಜ್ಞಾನವನ್ನು ಬಳಸಿಕೊಂಡು ಕೃಷಿ ಕಾರ್ಯಗಳನ್ನು ಸುಲಭಗೊಳಿಸಲು ಮುಂದಾಗುತ್ತಿದ್ದಾರೆ. ಕಳೆ ನಿಯಂತ್ರಣ ಸೇರಿದಂತೆ ವಿವಿಧ ಕೃಷಿ ಚಟುವಟಿಕೆಗಳಲ್ಲಿ ಯಾಂತ್ರೀಕರಣ ಅಳವಡಿಸಿಕೊಳ್ಳುವುದರಿಂದ ರೈತರ ಶ್ರಮ ಮತ್ತು ಸಮಯ ಉಳಿತಾಯವಾಗಲಿದೆ.

ಕೃಷಿ ಕ್ಷೇತ್ರದಲ್ಲಿ ಇಂತಹ ಸ್ಥಳೀಯ ತಂತ್ರಜ್ಞಾನ ಆಧಾರಿತ ಪ್ರಯೋಗಗಳಿಗೆ ಉತ್ತೇಜನ ನೀಡುವುದರ ಜತೆಗೆ, ರೈತರಿಗೆ ಕೈಗೆಟುಕುವ ದರದಲ್ಲಿ ಕೃಷಿ ಯಂತ್ರೋಪಕರಣಗಳು ಲಭ್ಯವಾಗುವಂತೆ ಸಂಬಂಧಿಸಿದ ಇಲಾಖೆ ಹಾಗೂ ಕೃಷಿ ಸಂಸ್ಥೆಗಳು ಕ್ರಮ ಕೈಗೊಳ್ಳಬೇಕು ಎಂದು ರೈತರು ಒತ್ತಾಯಿಸಿದ್ದಾರೆ.

ವಿಜಯನಗರ 4,44,094 ಮಕ್ಕಳಿಗೆ ಅಲ್ಬೆಂಡಜೋಲ್ ಮಾತ್ರೆ ವಿತರಣೆ ಗುರಿ: ಡಿಎಚ್‌ಒ ಡಾ.ಟಿ.ಲಿಂಗರಾಜು

ವಿಜಯನಗರ,ಆ.12-

ರಾಷ್ಟ್ರೀಯ ಜಂತುಹುಳು ನಿವಾರಣಾ ದಿನಾಚರಣೆ ಕಾರ್ಯಕ್ರಮದ ಅಂಗವಾಗಿ 1,583 ಅಂಗನವಾಡಿ ಕೇಂದ್ರಗಳು, 1,203 ಸರ್ಕಾರಿ ಶಾಲೆಗಳು ಹಾಗೂ 406 ಖಾಸಗಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಒಟ್ಟು 4,44,094 ಮಕ್ಕಳಿಗೆ ಅಲ್ಬೆಂಡಜೋಲ್ ಮಾತ್ರೆ ನೀಡುವ ಗುರಿ ಹೊಂದಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಟಿ.ಲಿಂಗರಾಜು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಸಹಯೋಗದಲ್ಲಿ ಸೋಮವಾರ ಅಮರಾವತಿ ಸರ್ಕಾರಿ ಬಾಲಕಿಯರ ಪ್ರೌಢ ಶಾಲೆಯಲ್ಲಿ ಆಯೋಜಿಸಲಾಗಿದ್ದ ರಾಷ್ಟ್ರೀಯ ಜಂತುಹುಳು ನಿವಾರಣಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಜಂತುಹುಳುಗಳ ಬಾಧೆಯಿಂದ ಮಕ್ಕಳಲ್ಲಿ ಅಪೌಷ್ಟಿಕತೆ ಹಾಗೂ ರಕ್ತಹೀನತೆ ಉಂಟಾಗಿ, ದೈಹಿಕ ಬೆಳವಣಿಗೆಯ ಜೊತೆಗೆ ಜ್ಞಾಪಕ ಶಕ್ತಿಯ ಮೇಲೂ ಪರಿಣಾಮ ಬೀರುತ್ತದೆ. ಆದ್ದರಿಂದ ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು ಎಂದರು. ದೇಶದಲ್ಲಿ ಶೇ.56ರಷ್ಟು ಜನರಲ್ಲಿ ರಕ್ತಹೀನತೆ ಕಂಡುಬರುತ್ತಿದ್ದು, ಮಹಿಳೆಯರು ಹಾಗೂ ಮಕ್ಕಳಲ್ಲಿ ಇದರ ಪ್ರಮಾಣ ಹೆಚ್ಚಾಗಿ ಕಂಡುಬರುತ್ತದೆ. ಜಂತುಹುಳುಗಳ ಸೋಂಕಿನಿಂದ ಮಕ್ಕಳನ್ನು ರಕ್ಷಿಸಲು ಮನೆಯ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಊಟ ಮಾಡುವ ಮೊದಲು ಹಾಗೂ ಶೌಚಾಲಯ ಬಳಕೆಯ ನಂತರ ಸೋಪಿನಿಂದ ಕೈಗಳನ್ನು ಚೆನ್ನಾಗಿ ತೊಳೆಯಬೇಕು. ಬಿಸಿಯಾದ ಆಹಾರವನ್ನು ಸೇವಿಸಬೇಕು. ತರಕಾರಿ ಹಾಗೂ ಹಣ್ಣುಗಳನ್ನು ಸೇವಿಸುವ ಮೊದಲು ಸ್ವಚ್ಛವಾಗಿ ತೊಳೆಯಬೇಕು. ಮಕ್ಕಳು ಬರಿಗಾಲಿನಲ್ಲಿ ಓಡಾಡುವುದನ್ನು ತಪ್ಪಿಸಬೇಕು ಎಂದು ಸಲಹೆ ನೀಡಿದರು. ಜಂತುಹುಳು ನಿಯಂತ್ರಣಕ್ಕೆ ಆರೋಗ್ಯ ಇಲಾಖೆ ನೀಡುವ ಅಲ್ಬೆಂಡಜೋಲ್ ಮಾತ್ರೆಗಳನ್ನು ಸೇವಿಸಬೇಕು. 1ರಿಂದ 19 ವರ್ಷದೊಳಗಿನ ಎಲ್ಲ ಮಕ್ಕಳು ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡು ಜಂತುಹುಳು ಮುಕ್ತ ಜಿಲ್ಲೆಯನ್ನಾಗಿಸಲು ಎಲ್ಲರೂ ಸಹಕರಿಸಬೇಕು ಎಂದು ಕರೆ ನೀಡಿದರು. ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಜಂಬಯ್ಯ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಅಮರಾವತಿ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ರಾಜೀವ್ ಅವರು ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಡಾ.ನಾಗರಾಜ್ ಹವಲ್ದಾರ್, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ರಾಧಿಕಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಗಂಗಪ್ಪ, ಅಮರಾವತಿ ಸರ್ಕಾರಿ ಬಾಲಕಿಯರ ಪ್ರೌಢ ಶಾಲೆಯ ಪ್ರಾಂಶುಪಾಲ ವೆಂಕಟೇಶ್ ಸೇರಿದಂತೆ ವಿದ್ಯಾರ್ಥಿಗಳು ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

ಜೈಲಿನಲ್ಲಿ ಪ್ರಜ್ವಲ್ ರೇವಣ್ಣ ಬಳಿ ಸ್ಮಾರ್ಟ್‌ಫೋನ್ ಪತ್ತೆ, ಸಹಾಯಕ ಅಧೀಕ್ಷಕ ಅಮಾನತು

ಬೆಂಗಳೂರು, ಆ.12- ಅತ್ಯಾಚಾರ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರ ಬ್ಯಾರಕ್‌ನಲ್ಲಿ ಆಂಡ್ರಾಯ್ಡ್ ಮೊಬೈಲ್‌ಫೋನ್ ಪತ್ತೆಯಾಗಿದೆ.



ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಕೇಂದ್ರ ಅಪರಾಧ ವಿಭಾಗ (ಸಿಸಿಬಿ) ನಡೆಸಿದ ದಾಳಿಯ ವೇಳೆ ಫೋನ್ ವಶಪಡಿಸಿಕೊಳ್ಳಲಾಗಿದೆ ಎಂದು ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಡಿಜಿಪಿ ಅಲೋಕ್ ಕುಮಾರ್ ತಿಳಿಸಿದ್ದಾರೆ.

ಹೈ ಸೆಕ್ಯುರಿಟಿ ಜೈಲಿನಲ್ಲಿರುವ ಹೈಪ್ರೊಫೈಲ್ ಕೈದಿಗಳು ಹಾಗೂ ಇತರ ಕೈದಿಗಳನ್ನು ಗುರಿಯಾಗಿಸಿಕೊಂಡು ಸಿಸಿಬಿ ನಾಲ್ಕರಿಂದ ಐದು ಗಂಟೆಗಳ ಕಾಲ ತಪಾಸಣೆನಡೆಸಿತ್ತು. ಈ ವೇಳೆ ಪ್ರಜ್ವಲ್ ರೇವಣ್ಣ ಅವರ ಬ್ಯಾರಕ್‌ನಿಂದ ಒಂದು ಆಂಡ್ರಾಯ್ಡ್ ಫೋನ್ ವಶಪಡಿಸಿಕೊಳ್ಳಲಾಗಿದೆ ಎಂದು ಡಿಜಿಪಿ ಹೇಳಿದ್ದಾರೆ.

ಈ ಸಂಬಂಧ ಸಿಸಿಬಿ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಎಫ್‌ಐಆರ್ ದಾಖಲಿಸುವ ಪ್ರಕ್ರಿಯೆ ನಡೆಯುತ್ತಿದೆ ಎಂದು ಅವರು ತಿಳಿಸಿದ್ದಾರೆ.ಕರ್ತವ್ಯಲೋಪದ ಆರೋಪದ ಹಿನ್ನೆಲೆಯಲ್ಲಿ ದಕ್ಷಿಣ ವಿಭಾಗದ ಡಿಐಜಿ ನೀಡಿದ ವರದಿ ಆಧರಿಸಿ ಸಹಾಯಕ ಅಧೀಕ್ಷಕ ಇರಣ್ಣ ರಂಗಾಪುರ ಅವರನ್ನು ಅಮಾನತುಗೊಳಿಸಲಾಗಿದೆ ಅಲ್ಲದೆ ಬೆಂಗಳೂರು ಕೇಂದ್ರ ಕಾರಾಗೃಹದ ಅಧೀಕ್ಷಕರಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಲಾಗಿದೆ.

ಈ ಘಟನೆ ಕುರಿತು ಸಮಗ್ರ ವಿಚಾರಣೆ ನಡೆಸಲಾಗುತ್ತಿದೆ ಎಂದು ಡಿಜಿಪಿ ತಿಳಿಸಿದ್ದಾರೆ. ತಪಾಸಣೆಯಲ್ಲಿ ಮೊಬೈಲ್ ಹೊರತುಪಡಿಸಿ ಯಾವುದೇ ಇತರ ನಿಷೇಧಿತ ವಸ್ತು ಪತ್ತೆಯಾಗಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಸಾಮಾಜಿಕ ನ್ಯಾಯಕ್ಕಾಗಿ ಅಣ್ಣಾಭಾವು ಸಾಠೆ ಸಾಹಿತ್ಯದ ಮೂಲಕ ಹೋರಾಡಿದರು: ದೇವಿದಾಸ್ ತುಮಕುಂಟೆ



ಬೀದರ್,ಆ.12-

ಸಾಹಿತ್ಯ ರತ್ನ, ಲೋಕಶಾಹೀರ್ ಅಣ್ಣಾಭಾವು ಸಾಠೆ ಅವರು ಬಡವರು ಹಾಗೂ ಧ್ವನಿಯಿಲ್ಲದವರ ಪರ ಸಾಮಾಜಿಕ ನ್ಯಾಯಕ್ಕಾಗಿ ತಮ್ಮ ಕಥೆ, ಕಾದಂಬರಿ ಹಾಗೂ ಸಾಹಿತ್ಯದ ಮೂಲಕ ನಿರಂತರವಾಗಿ ಹೋರಾಟ ನಡೆಸಿದ್ದರು ಎಂದು ಉಪನ್ಯಾಸಕ ದೇವಿದಾಸ್ ತುಮಕುಂಟೆ ಹೇಳಿದರು.

ಕರ್ನಾಟಕ ಮಾದಿಗ ವೇಲ್‌ಫೇರ್ ಅಸೋಸಿಯೇಷನ್ ಜಿಲ್ಲಾ ಘಟಕದ ವತಿಯಿಂದ ನೌಬಾದ್‌ನ ಡಾ. ಬಾಬು ಜಗಜೀವನರಾಂ ಸಮುದಾಯ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಅಣ್ಣಾಭಾವು ಸಾಠೆ ಅವರ 106ನೇ ಜಯಂತ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅಣ್ಣಾಭಾವು ಸಾಠೆ ಅವರು ಸಮಾಜದಲ್ಲಿನ ಶೋಷಿತರು, ಬಡವರು ಹಾಗೂ ಧ್ವನಿಯಿಲ್ಲದವರ ಸಮಸ್ಯೆಗಳನ್ನು ತಮ್ಮ ಸಾಹಿತ್ಯದ ಮೂಲಕ ಆಳುವ ಸರ್ಕಾರಗಳ ಗಮನಕ್ಕೆ ತಂದು, ಸಾಮಾಜಿಕ ಬದಲಾವಣೆಗೆ ಶ್ರಮಿಸಿದ್ದರು. ಅವರ ಸಾಹಿತ್ಯವು ಶೋಷಿತ ಸಮುದಾಯಗಳ ಬದುಕು, ನೋವು ಹಾಗೂ ಹಕ್ಕುಗಳ ಪರವಾಗಿ ಧ್ವನಿ ಎತ್ತುವ ಮಾಧ್ಯಮವಾಗಿತ್ತು ಎಂದರು.

ಪ್ರಸ್ತುತ ಸಮಾಜದಲ್ಲಿಯೂ ಸಾಮಾಜಿಕ ನ್ಯಾಯ, ಸಮಾನತೆ ಹಾಗೂ ಶೋಷಿತರ ಹಕ್ಕುಗಳ ಪರವಾಗಿ ಎಲ್ಲ ಹೋರಾಟಗಾರರು ಧ್ವನಿ ಎತ್ತುವುದು ಅತ್ಯಂತ ಅಗತ್ಯವಾಗಿದೆ ಎಂದು ದೇವಿದಾಸ್ ತುಮಕುಂಟೆ ಹೇಳಿದರು.

ಈ ಸಂದರ್ಭದಲ್ಲಿ ಮಾದಾರ ಚೆನ್ನಯ್ಯ ಹೋರಾಟ ಸಮಿತಿಯ ರಾಜ್ಯಾಧ್ಯಕ್ಷ ರಮೇಶ್ ಕಟ್ಟಿತುಗಾಂವ್, ಸೂರ್ಯಕಾಂತ್, ಅಸೋಸಿಯೇಷನ್‌ನ ಸಂಸ್ಥಾಪಕ ಅಧ್ಯಕ್ಷ ಸ್ವಾಮಿದಾಸ ಕೆಂಪೇನೋರ್, ಸಂಗಮೇಶ್ ಏಣಕೂರ್, ವೆಂಕಟರಾವ್ ಪಾಟೀಲ್, ಪುಟ್ಟರಾಜ್ ರೇಕುಳಗಿ, ಸುರೇಶ್ ಎನ್. ದೊಡ್ಡಿ, ಕಮಲಹಾಸನ ಭಾವಿದೊಡ್ಡಿ, ಯೇಶಪ್ಪ ಶೇಂಬೆಳ್ಳಿ, ದಾವೀದ್, ಸಂತೋಷ್, ಮೋಹನ್, ವಿಶಾಲ್ ಚವ್ಹಾಣ (ಕಮಲನಗರ), ಉಮೇಶ್ ಅಡ್ಡೆ ಹಾಗೂ ನಾಗಣ್ಣ ಡೋಣೆ ಸೇರಿದಂತೆ ಇತರರು ಉಪಸ್ಥಿತರಿದ್ದರು. ಫಾಳೆಪ್ಪಾ ನಿರೂಪಿಸಿ, ವಂದಿಸಿದರು.

ನಿಮ್ಮೂರು ಸುದ್ದಿ

ಸಂಪಾದಕೀಯ



ಬಿಡದಿ ಭೂಸ್ವಾಧೀನಕ್ಕೆ 'ರೈತರು ಒಪ್ಪಿದ್ದಾರೆ' ಎಂಬುದು ನಿಜವಲ್ಲ, ಸರ್ಕಾರಕ್ಕೆ ಶೋಭೆ ತರುವುದಿಲ್ಲ

ಅಭಿವೃದ್ಧಿಯ ಹೆಸರಿನಲ್ಲಿ ಆಹಾರ ಉತ್ಪಾದಿಸುವ ಫಲವತ್ತಾದ ಭೂಮಿಯನ್ನು ನಾಶಮಾಡುವುದು, ಸ್ವಾವಲಂಬಿ ರೈತರನ್ನು ಪರಿಹಾರದ ಹಣದ ಅವಲಂಬಿತರನ್ನಾಗಿಸುವುದು ಹಾಗೂ ಗ್ರಾಮೀಣ ಜೀವನೋಪಾಯವನ್ನು ನಗರ ರಿಯಲ್ ಎಸ್ಟೇಟ್‌ಗೆ ಬಲಿಕೊಡುವುದು ಅಭಿವೃದ್ಧಿಯ ಏಕೈಕ ಮಾದರಿ ಆಗಬಾರದು. ಸರ್ಕಾರಕ್ಕೆ ನಿಜವಾಗಿಯೂ ರೈತರ ಒಪ್ಪಿಗೆ ಇದೆ ಎಂಬ ವಿಶ್ವಾಸವಿದ್ದರೆ 26 ಗ್ರಾಮಗಳ ಗ್ರಾಮಸಭೆಗಳಲ್ಲಿ ಪಾರದರ್ಶಕವಾಗಿ ರೈತರ ಅಭಿಪ್ರಾಯ ದಾಖಲಿಸಲಿ.

ಬಿಡದಿ ಟೌನ್‌ಶಿಪ್ ಯೋಜನೆಗಾಗಿ ರೈತರು ಪರಿಹಾರ ಪಡೆದು ಸ್ವಯಂಪ್ರೇರಿತವಾಗಿ ಜಮೀನು ಬಿಟ್ಟುಕೊಡಲು ಒಪ್ಪಿಕೊಂಡಿದ್ದಾರೆ ಎಂಬ ವಾದವನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ರಾಜ್ಯ ಸರ್ಕಾರ ಮುಂದಿಡುತ್ತಿದೆ. ರೈತರಿಗೆ ಮಾರುಕಟ್ಟೆ ದರಕ್ಕಿಂತ ಉತ್ತಮ ಪರಿಹಾರ ನೀಡಲಾಗುತ್ತಿದೆ, ಭೂಮಿ ಕಳೆದುಕೊಳ್ಳುವ ಕುಟುಂಬಗಳ ಹಿತಾಸಕ್ತಿಯನ್ನು ರಕ್ಷಿಸುವ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ. ಯೋಜನೆಗೆ ಕೆಲವರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಅದು ಒಟ್ಟಾರೆ ರೈತ ಸಮುದಾಯದ ಅಭಿಪ್ರಾಯವಲ್ಲ ಎಂದು ಸರ್ಕಾರ ವಾದಿಸುತ್ತಿದೆ. ಆದರೆ, ನೂರಾರು ಎಕರೆ ಫಲವತ್ತಾದ ಕೃಷಿ ಭೂಮಿಯನ್ನು ನೆಚ್ಚಿಕೊಂಡು ತಲೆತಲಾಂತರಗಳಿಂದ ಜೀವನ ಸಾಗಿಸುತ್ತಿರುವ ಭೂಮಿಪುತ್ರರು ಈ ಬಲವಂತದ ಭೂಸ್ವಾಧೀನ ಪ್ರಕ್ರಿಯೆಯನ್ನು ತೀವ್ರವಾಗಿ ವಿರೋಧಿಸುತ್ತಿದ್ದಾರೆ ಎಂಬುದೇ ವಾಸ್ತವ.

ಸರ್ಕಾರವು ಸಂಕಷ್ಟದಲ್ಲಿರುವ ಕೆಲವೇ ಕೆಲವು ಭೂಮಾಲೀಕರನ್ನು ಅಥವಾ ದಲ್ಲಾಳಿಗಳನ್ನು ಮುಂದಿಟ್ಟುಕೊಂಡು, ಇಡೀ ರೈತ ಸಮುದಾಯವೇ ಯೋಜನೆಗೆ ಒಪ್ಪಿಗೆ ನೀಡಿದೆ ಎಂದು ಬಿಂಬಿಸುತ್ತಿರುವುದು ಅಕ್ಷರಶಃ ವಿತಂಡವಾದದಂತೆ ಕಾಣುತ್ತಿದೆ. ಕೃಷಿಯನ್ನೇ ನೆಚ್ಚಿಕೊಂಡಿರುವ ಸಣ್ಣ ಮತ್ತು ಅತಿ ಸಣ್ಣ ರೈತರ ಆತಂಕ, ಪ್ರತಿಭಟನೆ ಹಾಗೂ ಆಕ್ರೋಶಗಳನ್ನು ಸರ್ಕಾರ ಸಂಪೂರ್ಣವಾಗಿ ಕಡೆಗಣಿಸುತ್ತಿದೆ.

ಅಭಿವೃದ್ಧಿಯ ನೆಪದಲ್ಲಿ ರಿಯಲ್ ಎಸ್ಟೇಟ್ ಉದ್ಯಮಕ್ಕೆ ಹಸಿರು ನಿಶಾನೆ ತೋರಲು ಹೊರಟಿರುವ ಸರ್ಕಾರ, ಕೃಷಿಕರ ಭವಿಷ್ಯವನ್ನು ಬಲಿ ಕೊಡಲು ಹೊರಟಿದೆ. ರೈತರ ನೈಜ ಅಭಿಪ್ರಾಯಕ್ಕೆ ಬೆಲೆ ನೀಡದೆ, ಒಪ್ಪಿಗೆ ಸಿಕ್ಕಿದೆ ಎಂದು ಸುಳ್ಳು ಹೇಳುತ್ತಿದೆ. ಆದರೆ, ಸರ್ಕಾರದ ಈ ವಾದಕ್ಕೆ ಯಾವುದೇ ಪುರಾವೆಗಳಿಲ್ಲ ಎಂಬುದೇ ವಾಸ್ತವ.

ಹಾಗೆ ನೋಡಿದರೆ, ಕಳೆದ ಜುಲೈ 23ರಂದು ಬೈರಮಂಗಲದಲ್ಲಿ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ಅವರ ನೇತೃತ್ವದಲ್ಲಿ ನಡೆದ ಪಬ್ಲಿಕ್ ಹಿಯರಿಂಗ್ ಸರ್ಕಾರದ ವಾದವನ್ನು ಬಟಾಬಯಲು ಮಾಡಿದೆ. ಅಂದು ಬಿಡದಿ ಸೀಮೆಯ 26 ಗ್ರಾಮಗಳ ಸಂತ್ರಸ್ತ ರೈತರು ಮತ್ತು ಅವರ ಪ್ರತಿನಿಧಿಗಳು ತಮ್ಮ ಅಹವಾಲುಗಳನ್ನು ನೇರವಾಗಿ ಮಂಡಿಸಿದ್ದಾರೆ. ಅಲ್ಲಿ ನೆರೆದಿದ್ದ ಸಾವಿರಾರು ರೈತರು ಟೌನ್‌ಶಿಪ್ ಯೋಜನೆಗೆ ತಮ್ಮ ಭೂಮಿ ಬಿಟ್ಟುಕೊಡಲು ಸಿದ್ಧರಿಲ್ಲವೆಂದು ಒಕ್ಕೊರಲಿನಿಂದ ಘೋಷಿಸಿದ್ದಾರೆ.

ಭೂಸ್ವಾಧೀನ ವಿರುದ್ಧದ ರೈತರ ಹೋರಾಟವು ಕೇವಲ ಭಾವನಾತ್ಮಕ ವಿರೋಧವಲ್ಲ. ಸ್ವಾಧೀನಕ್ಕೆ ಗುರುತಿಸಿರುವ ಸುಮಾರು 9,600 ಎಕರೆ ಪ್ರದೇಶ ಬಂಜರು ಭೂಮಿಯೂ ಅಲ್ಲ. ಅದು ವೃಷಭಾವತಿ ಮತ್ತು ಅರ್ಕಾವತಿ ಜಲಾನಯನ ಪ್ರದೇಶದಲ್ಲಿರುವ ನೀರಾವರಿ, ಫಲವತ್ತಾದ, ಬಹುಬೆಳೆ ಕೃಷಿಭೂಮಿ. ಈ ಪ್ರದೇಶದಲ್ಲಿ ನಾಲ್ಕು ಲಕ್ಷಕ್ಕೂ ಹೆಚ್ಚು ತೆಂಗಿನ ಮರಗಳು ಸೇರಿದಂತೆ ಸುಮಾರು ಹತ್ತು ಲಕ್ಷ ಮರಗಳಿವೆ. ಸುಮಾರು 2,000 ಎಕರೆ ಹಿಪ್ಪುನೇರಳೆ ಬೆಳೆಯಿದೆ. ತರಕಾರಿ, ರಾಗಿ, ಮುಸುಕಿನ ಜೋಳ, ಬೇಬಿಕಾರ್ನ್, ಮಾವು, ಅಡಿಕೆ ಸೇರಿದಂತೆ ಹಲವು ಬೆಳೆಗಳ ಕೃಷಿಯಿದೆ. ಹೈನುಗಾರಿಕೆಯಿಂದ ಬೆಂಗಳೂರಿಗೆ ದಿನಕ್ಕೆ ಸುಮಾರು 1.5 ಲಕ್ಷ ಲೀಟರ್ ಹಾಲು ಪೂರೈಕೆಯಾಗುತ್ತಿದೆ. ಅಂದರೆ ಸರ್ಕಾರ ಸ್ವಾಧೀನಪಡಿಸಿಕೊಳ್ಳಲು ಹೊರಟಿರುವುದು ಕೇವಲ ಭೂಮಿಯನ್ನಲ್ಲ; ಬೆಂಗಳೂರು ಮತ್ತು ರಾಮನಗರದ ಆಹಾರ ಸರಪಳಿಯ ಭಾಗವಾಗಿರುವ ಜೀವಂತ ಕೃಷಿ ಆರ್ಥಿಕತೆಯನ್ನು.

ಈ ಪ್ರಮಾಣದ ಆಹಾರ ಸರಪಳಿ ಹೊಂದಿರುವ, ವರ್ಷಂಪ್ರತಿ ಆದಾಯ ನೀಡುವ ಜಮೀನಿಗೆ ಒಮ್ಮೆ ಕೊಡುವ ಪರಿಹಾರದ ಹಣ ಹೇಗೆ ಪರ್ಯಾಯವಾಗಲು ಸಾಧ್ಯ? ಅರ್ಧ ಎಕರೆ, ಒಂದು ಎಕರೆ, ಕೆಲವು ಗುಂಟೆಗಳಷ್ಟೇ ಭೂಮಿ ಹೊಂದಿರುವ ಸಣ್ಣ ರೈತ ಕುಟುಂಬಗಳ ಜೀವನೋಪಾಯಕ್ಕೆ ಪರಿಹಾರದ ಮೊತ್ತ ಎಷ್ಟು ವರ್ಷ ಸಾಕಾಗುತ್ತದೆ? ಭೂಮಿಯಿಂದ ಬರುವ ತೆಂಗು, ಹಾಲು, ತರಕಾರಿ, ರೇಷ್ಮೆ ಹಾಗೂ ತೋಟಗಾರಿಕೆ ಆದಾಯಕ್ಕೆ ಪರಿಹಾರದ ಹಣ ಶಾಶ್ವತ ಪರ್ಯಾಯವಲ್ಲ. ಈ ಜಮೀನುಗಳಲ್ಲಿ ಕುಟುಂಬಗಳ ಬದುಕಷ್ಟೇ ಅಲ್ಲ, ಅವರ ಸಾಮಾಜಿಕ ಸಂಬಂಧ, ಪೂರ್ವಜರ ನೆನಪು, ಮುಂದಿನ ತಲೆಮಾರಿನ ಭದ್ರತೆಯೂ ನೆಲೆಗೊಂಡಿದೆ.

ಇನ್ನೂ ಗಂಭೀರ ಸಂಗತಿಯೆಂದರೆ, ಭೂಸ್ವಾಧೀನದಿಂದ ಭೂಮಾಲೀಕರಷ್ಟೇ ಬಾಧಿತರಾಗುವುದಿಲ್ಲ. ಗುತ್ತಿಗೆ ಕೃಷಿಕರು, ದಲಿತ ಮತ್ತು ಭೂರಹಿತ ಕೃಷಿಕರು, ಕೃಷಿ ಕೂಲಿ ಕಾರ್ಮಿಕರು, ಹೈನುಗಾರರು, ರೇಷ್ಮೆ ಚಟುವಟಿಕೆ ಅವಲಂಬಿಸಿರುವ ಕುಟುಂಬಗಳು ಕೂಡ ಜೀವನೋಪಾಯ ಕಳೆದುಕೊಳ್ಳುತ್ತಾರೆ. ಸಾವಿರಾರು ಕೃಷಿ ಕಾರ್ಮಿಕರಿಗೆ ಜಮೀನಿನ ಮಾಲೀಕತ್ವವೇ ಇಲ್ಲದಿರುವುದರಿಂದ ಅವರಿಗೆ ಪರಿಹಾರವೂ ಸಿಗುವುದಿಲ್ಲ. ಸರ್ಕಾರವು ಸಮಗ್ರ ಸಾಮಾಜಿಕ ಪರಿಣಾಮ ಮೌಲ್ಯಮಾಪನ ನಡೆಸಿದ್ದರೆ ಇಂತಹ ಕಾಣದ ಸಂತ್ರಸ್ತರ ನಿಜವಾದ ಸಂಖ್ಯೆ ಮತ್ತು ಅವರ ಮೇಲಿನ ಪರಿಣಾಮಗಳು ಸರ್ಕಾರಕ್ಕೂ ಅರ್ಥವಾಗಿರುತ್ತಿತ್ತು.

ಕಾಯ್ದೆ-2013ರ ಮೂಲ ಸುರಕ್ಷತಾ ನಿಯಮಗಳ ಅಡಿಯಲ್ಲಿ ಈ ಟೌನ್‌ಶಿಪ್ ಯೋಜನೆಯನ್ನು ವಿಶ್ಲೇಷಿಸಿ ನೋಡಿದರೆ ಇನ್ನೂ ಗಂಭೀರ ಸಂಗತಿಗಳು ಕಾಣುತ್ತವೆ. ಯೋಜನೆಯಿಂದಾಗುವ ಸಾಮಾಜಿಕ ಪರಿಣಾಮ ಮೌಲ್ಯಮಾಪನ, ಸಾರ್ವಜನಿಕ ವಿಚಾರಣೆ, ತಜ್ಞರ ಮೌಲ್ಯಮಾಪನ, ಸಾರ್ವಜನಿಕ ಉದ್ದೇಶದ ಪರಿಶೀಲನೆ ಹಾಗೂ ಆಹಾರ ಭದ್ರತೆಯ ಮೇಲಿನ ಪರಿಣಾಮದ ಕುರಿತು ಸರ್ಕಾರವು ಅಧ್ಯಯನವನ್ನೇ ನಡೆಸಿಲ್ಲ. ಸಾವಿರಾರು ಎಕರೆ ನೀರಾವರಿ ಮತ್ತು ಬಹುಬೆಳೆ ಕೃಷಿಭೂಮಿಯನ್ನು ನಗರ ಯೋಜನೆಗಾಗಿ ಪರಿವರ್ತಿಸುವಾಗ ಆಹಾರ ಭದ್ರತೆಯ ಮೇಲೆ ಅದರ ಪರಿಣಾಮವನ್ನು ಪರಿಶೀಲಿಸದೆ ಸರ್ಕಾರ ಯೋಜನೆಯ ಅನುಷ್ಠಾನಕ್ಕೆ ಮುಂದಾಗಿದ್ದಾದರೂ ಹೇಗೆ?

ಪರಿಸರದ ವಿಚಾರದಲ್ಲಿ ಗಂಭೀರ ಅಂಶಗಳಿವೆ. ಪರಿಸರದ ಮೇಲಿನ ಪರಿಣಾಮಗಳನ್ನು ಪರಿಹಾರದ ಹಣದಿಂದ ಮುಚ್ಚಲಾಗದು. ಯೋಜನೆಗಾಗಿ ಸರ್ಕಾರವು ಗುರುತಿಸಿರುವ 9,600 ಎಕರೆ ಪ್ರದೇಶದಲ್ಲಿ ಲಕ್ಷಾಂತರ ಮರಗಳು, ಕೆರೆಕೊಳವೆಬಾವಿ ವ್ಯವಸ್ಥೆ, ಜಲಾನಯನ ಪ್ರದೇಶ, ಪಶುಪಕ್ಷಿ ಜೀವವೈವಿಧ್ಯವಿದೆ. ಇವೆಲ್ಲವೂ ಬೆಂಗಳೂರಿನ ಪಶ್ಚಿಮದಕ್ಷಿಣ ಭಾಗದ ಪರಿಸರ ಸುರಕ್ಷತಾ ವಲಯದಂತೆ ಕಾರ್ಯನಿರ್ವಹಿಸುತ್ತಿವೆ. ಬೆಂಗಳೂರು ಈಗಾಗಲೇ ಅತಿಯಾದ ನಗರೀಕರಣ, ಸಂಚಾರ, ನೀರು, ತ್ಯಾಜ್ಯ ಹಾಗೂ ಉಷ್ಣತೆಯ ಒತ್ತಡ ಎದುರಿಸುತ್ತಿರುವಾಗ ಮತ್ತಷ್ಟು ಫಲವತ್ತಾದ ಹಸಿರು ಪ್ರದೇಶವನ್ನು ಕಾಂಕ್ರೀಟ್ ವಿಸ್ತರಣೆಗೆ ತೆರೆಯುವುದೇ ಸ್ಮಾರ್ಟ್ ಅಭಿವೃದ್ಧಿಯೇ ಎಂಬ ಪ್ರಶ್ನೆಗೆ ಸರ್ಕಾರದ ಬಳಿ ಉತ್ತರವಿದೆಯೇ?

ಬಿಡದಿ ವಿವಾದವನ್ನು ಪರಿಹಾರದ ಮೊತ್ತ ಎಷ್ಟು? ಅಥವಾ ಎಷ್ಟು ರೈತರು ಹಣ ಪಡೆದಿದ್ದಾರೆ? ಎಂಬ ಲೆಕ್ಕಕ್ಕೆ ಇಳಿಸುವುದೇ ತಪ್ಪು. ಪರಿಹಾರ ಸ್ವೀಕರಿಸಿರುವ ಕೆಲವರ ಸಂಖ್ಯೆಯನ್ನು ಇಡೀ ಪ್ರದೇಶದ ರೈತರ ಸಮ್ಮತಿ ಎಂದು ಬಿಂಬಿಸಲಾಗದು. ಭಯ, ಗೊಂದಲ, ಆಡಳಿತಾತ್ಮಕ ಒತ್ತಡ ಅಥವಾ ಅನಿವಾರ್ಯತೆಯಿಂದ ಕೆಲವರು ಪರಿಹಾರ ಪಡೆದಿದ್ದರೆ ಅದನ್ನು ಸ್ವತಂತ್ರ ಹಾಗೂ ತಿಳಿವಳಿಕೆಯ ಸಮ್ಮತಿ ಎಂದು ಕರೆಯಲೂ ಸಾಧ್ಯವಿಲ್ಲ.

ಅಭಿವೃದ್ಧಿಯ ಹೆಸರಿನಲ್ಲಿ ಆಹಾರ ಉತ್ಪಾದಿಸುವ ಫಲವತ್ತಾದ ಭೂಮಿಯನ್ನು ನಾಶಮಾಡುವುದು, ಸ್ವಾವಲಂಬಿ ರೈತರನ್ನು ಪರಿಹಾರದ ಹಣದ ಅವಲಂಬಿತರನ್ನಾಗಿಸುವುದು ಹಾಗೂ ಗ್ರಾಮೀಣ ಜೀವನೋಪಾಯವನ್ನು ನಗರ ರಿಯಲ್ ಎಸ್ಟೇಟ್‌ಗೆ ಬಲಿಕೊಡುವುದು ಅಭಿವೃದ್ಧಿಯ ಏಕೈಕ ಮಾದರಿ ಆಗಬಾರದು. ಸರ್ಕಾರಕ್ಕೆ ನಿಜವಾಗಿಯೂ ರೈತರ ಒಪ್ಪಿಗೆ ಇದೆ ಎಂಬ ವಿಶ್ವಾಸವಿದ್ದರೆ 26 ಗ್ರಾಮಗಳ ಗ್ರಾಮಸಭೆಗಳಲ್ಲಿ ಪಾರದರ್ಶಕವಾಗಿ ರೈತರ ಅಭಿಪ್ರಾಯ ದಾಖಲಿಸಲಿ; ಸ್ವತಂತ್ರ ಸಾಮಾಜಿಕ ಪರಿಣಾಮ ಮೌಲ್ಯಮಾಪನ ನಡೆಸಲಿ; ಯೋಜನೆಯ ಸಂಪೂರ್ಣ ಮಾಸ್ಟರ್ ಪ್ಲಾನ್ ಪ್ರಕಟಿಸಲಿ; ಪರಿಸರ ಪರಿಣಾಮ, ಆಹಾರ ಭದ್ರತೆ ಹಾಗೂ ಜೀವನೋಪಾಯ ನಷ್ಟದ ಲೆಕ್ಕವನ್ನು ಜನರ ಮುಂದಿಡಲಿ.

ಅಲ್ಲಿಯವರೆಗೆ ರೈತರು ಒಪ್ಪಿದ್ದಾರೆ, ಪರಿಹಾರ ಪಡೆದಿದ್ದಾರೆ ಎಂಬ ಮಾತನ್ನು ಪುನರಾವರ್ತಿಸುವುದರಿಂದ ಸತ್ಯ ಬದಲಾಗುವುದಿಲ್ಲ. ವಾಸ್ತವದಲ್ಲಿ ರೈತರ ನಿಲುವು ಸ್ಪಷ್ಟವಾಗಿದೆ; ರೈತರು ಹಣದ ಮೊತ್ತಕ್ಕಾಗಿ ಹೋರಾಡುತ್ತಿಲ್ಲ; ತಮ್ಮ ಭೂಮಿ, ಕೃಷಿ ಮತ್ತು ಬದುಕನ್ನು ಉಳಿಸಿಕೊಳ್ಳಲು ಹೋರಾಡುತ್ತಿದ್ದಾರೆ. ಈ ವಾಸ್ತವವನ್ನು ಸರ್ಕಾರ ಒಪ್ಪಿಕೊಳ್ಳಬೇಕು. ವಿತಂಡವಾದವನ್ನು ನಿಲ್ಲಿಸಿ, ಭೂಸ್ವಾಧೀನ ಪ್ರಕ್ರಿಯೆಯನ್ನು ಮರುಪರಿಶೀಲಿಸಿ, ರೈತರೊಂದಿಗೆ ನೇರವಾಗಿ ಮಾತುಕತೆ ನಡೆಸಬೇಕು. ರೈತರ ಅಸಮ್ಮತಿಗೆ ತಲೆಬಾಗಿ ಯೋಜನೆಯನ್ನು ಕೈಬಿಡಬೇಕು!

ರಾಜ್ಯದ ಅನ್ನದ ಬಟ್ಟಲಿಗೆ ಭಾರೀ ಹೊಡೆತ: ಬರಗಾಲದ ಡೊಮಿನೊ ಎಫೆಕ್ಟ್ ಹೇಗಿದೆ? ಇಲ್ಲಿದೆ ಓದಿ

ಮಳೆಯ ಕೊರತೆ ಕೃಷಿ ಇಲಾಖೆಯ ಸಮಸ್ಯೆಯಾಗಿ ಆರಂಭವಾಗಿ, ಅಂತಿಮವಾಗಿ ಆಹಾರ, ಉದ್ಯೋಗ, ಹಣದುಬ್ಬರ, ಗ್ರಾಮೀಣ ಆರ್ಥಿಕತೆ, ನೀರು ಮತ್ತು ವಿದ್ಯುತ್‌ವರೆಗೂ ವ್ಯಾಪಿಸಬಹುದು. ಈ ಹಂತದಲ್ಲಿ ಸರ್ಕಾರ ಕೇವಲ ಮಳೆಯನ್ನು ನಿರೀಕ್ಷಿಸಿ ಕಾಯದೇ ಜಿಲ್ಲೆ ಮತ್ತು ತಾಲೂಕುವಾರು ಮಳೆ ಕೊರತೆ, ಬಿತ್ತನೆ ಪ್ರದೇಶ, ಬೆಳೆ ಸ್ಥಿತಿ ಮತ್ತು ಜಲಾಶಯ-ಕೆರೆಗಳ ಪರಿಸ್ಥಿತಿಯನ್ನು ನಿರಂತರವಾಗಿ ಮಾಪನ ಮಾಡಬೇಕಾಗಿದೆ.

ರಾಜ್ಯದ ಕೃಷಿ ವಲಯಕ್ಕೆ 2026ರ ಮುಂಗಾರು ಬರಗಾಲದ ಗಂಭೀರ ಎಚ್ಚರಿಕೆಯ ಗಂಟೆ ಬಾರಿಸುತ್ತಿದೆ. ಜೂನ್ ಮತ್ತು ಜುಲೈ ತಿಂಗಳುಗಳು ಮುಗಿದರೂ ನಿರೀಕ್ಷಿತ ಪ್ರಮಾಣದಲ್ಲಿ ಮಳೆ ಸುರಿಯದಿರುವುದು ಬಿತ್ತನೆಯಿಂದ ಹಿಡಿದು ಬೆಳೆ ಇಳುವರಿಯವರೆಗೆ ಕೃಷಿಯ ಪ್ರತಿಯೊಂದು ಹಂತದ ಮೇಲೂ ಪರಿಣಾಮ ಬೀರಿದೆ. ಪರಿಸ್ಥಿತಿ ಎಷ್ಟು ಗಂಭೀರವಾಗಿದೆ ಎಂದರೆ, ರಾಜ್ಯದ ಸುಮಾರು 150 ಲಕ್ಷ ಟನ್ ವಾರ್ಷಿಕ ಆಹಾರಧಾನ್ಯ ಉತ್ಪಾದನೆಯ ಗುರಿಯಲ್ಲಿ ಈಗಾಗಲೇ ಕನಿಷ್ಠ 50 ಲಕ್ಷ ಟನ್ ಉತ್ಪಾದನೆ ಕಳೆದುಕೊಳ್ಳುವ ಸಾಧ್ಯತೆ ಇದ್ದು, ಗುರಿಯ ಸುಮಾರು ಮೂರನೇ ಒಂದು ಭಾಗದಷ್ಟು ಉತ್ಪಾದನೆ ಕುಸಿಯುವ ಭೀತಿ ಎದುರಾಗಿದೆ.

ಇದಕ್ಕಿಂತ ಆತಂಕಕಾರಿ ಸಂಗತಿ ಎಂದರೆ ಸಂಕಷ್ಟ ಇಲ್ಲಿಗೇ ನಿಲ್ಲುವ ಲಕ್ಷಣ ಕಾಣುತ್ತಿಲ್ಲ. ಆಗಸ್ಟ್‌ನಲ್ಲಿಯೂ ಮಳೆ ಕೊರತೆ ಮುಂದುವರಿದರೆ ಭತ್ತ, ಮೆಕ್ಕೆಜೋಳ, ಜೋಳ, ರಾಗಿ ಸೇರಿ ಪ್ರಮುಖ ಬೆಳೆಗಳ ಉತ್ಪಾದನೆ ಕುಂಠಿತವಾಗಬಹುದು. ಇದರಿಂದಾಗಿ ಆಹಾರ ಧಾನ್ಯ ಉತ್ಪಾದನೆಯ ನಷ್ಟ 75 ಲಕ್ಷ ಟನ್‌ವರೆಗೆ ಏರಬಹುದು ಎಂದು ರಾಜ್ಯ ಸರ್ಕಾರದ ಮಾಜಿ ಕೃಷಿ ಸಲಹೆಗಾರ ಹಾಗೂ ಅಧ್ಯಕ್ಷ ಎ.ಬಿ. ಪಾಟೀಲ್ ಎಚ್ಚರಿಸಿದ್ದಾರೆ. ಕೃಷಿ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಪರಿಸ್ಥಿತಿ ಇನ್ನೂ ಗಂಭೀರವಾಗಬಹುದು ಎಂದಿದ್ದು, ಆಗಸ್ಟ್ ಅಂತ್ಯದ ವೇಳೆಗೆ ಸ್ಪಷ್ಟ ಚಿತ್ರಣ ಸಿಗಲಿದೆ ಎಂದು ಹೇಳಿದ್ದಾರೆ.

ಮುಂದಿನ ಎರಡು ವಾರಗಳು ಮತ್ತಷ್ಟು ನಿರ್ಣಾಯಕ

ಪರಿಸ್ಥಿತಿಯನ್ನು ಇನ್ನಷ್ಟು ಆತಂಕಕಾರಿಯಾಗಿಸಿರುವುದು ಮುಂದಿನ ಹವಾಮಾನ ಮುನ್ಸೂಚನೆ. ಆಗಸ್ಟ್ 11ರಂದು ಪ್ರಕಟವಾದ ಮಾಹಿತಿಯ ಪ್ರಕಾರ ಮುಂದಿನ ಸುಮಾರು ಎರಡು ವಾರಗಳಲ್ಲಿ ಪಶ್ಚಿಮ, ಮಧ್ಯ ಮತ್ತು ದಕ್ಷಿಣ ಭಾರತದಲ್ಲಿ ಸರಾಸರಿಗಿಂತ ಕಡಿಮೆ ಮಳೆಯಾಗುವ ಸಾಧ್ಯತೆಯಿದೆ. ದೇಶದ ಒಟ್ಟಾರೆ ಮುಂಗಾರು ಮಳೆಯೂ ಆಗಸ್ಟ್ 11ರವರೆಗೆ ಸರಾಸರಿಗಿಂತ ಸುಮಾರು ಶೇ.12 ಕಡಿಮೆಯಾಗಿತ್ತು. ಬಲಗೊಳ್ಳುತ್ತಿರುವ ಎಲ್ ನಿನೊ ಕಾರಣದಿಂದ ಆಗಸ್ಟ್ ಅಂತ್ಯದ ವೇಳೆಗೆ ಕೊರತೆ ಇನ್ನಷ್ಟು ಹೆಚ್ಚುವ ಸಾಧ್ಯತೆಯನ್ನೂ ಹವಾಮಾನ ಇಲಾಖೆ ಸೂಚಿಸಿದೆ.

ಇದು ಕರ್ನಾಟಕಕ್ಕೆ ವಿಶೇಷವಾಗಿ ಮುಖ್ಯ. ಏಕೆಂದರೆ ಯ 2026ರ ಮುಂಗಾರು ಋತುವಿನ ಮುನ್ಸೂಚನೆಯಲ್ಲೇ ಕರ್ನಾಟಕದಲ್ಲಿ ಒಟ್ಟಾರೆ ಮಳೆ ಸಾಮಾನ್ಯಕ್ಕಿಂತ ಕಡಿಮೆಯಾಗುವ ಸಾಧ್ಯತೆ ಹೆಚ್ಚು ಎಂದು ಹೇಳಲಾಗಿತ್ತು. ಕರಾವಳಿ ಕರ್ನಾಟಕ ಮತ್ತು ದಕ್ಷಿಣ ಒಳನಾಡಿನಲ್ಲಿ -(ಸಾಮಾನ್ಯಕ್ಕಿಂತಲೂ ಕಡಿಮೆ) ಮಳೆಯ ಸಾಧ್ಯತೆ ಹಾಗೂ ಉತ್ತರ ಒಳನಾಡಿನಲ್ಲಿ - - ಮಳೆಯ ಸಾಧ್ಯತೆಯನ್ನು ಸೂಚಿಸಲಾಗಿತ್ತು. ಹೊಸದಾಗಿ ಬಿತ್ತನೆಯಾಗಿರುವ ಬೆಳೆಗಳ ಬೇರುಗಳು ಇನ್ನೂ ಆಳಕ್ಕೆ ಹೋಗಿರುವುದಿಲ್ಲ. ಇಂಥ ಸಂದರ್ಭದಲ್ಲಿ ದೀರ್ಘಕಾಲದ ಒಣ ಅವಧಿ ಬಂದರೆ ಮಣ್ಣಿನ ಮೇಲ್ಮೈ ತೇವಾಂಶ ಬೇಗ ಒಣಗುವುದರಿಂದ ಬೆಳೆಗಳೂ ಒಣಗುವ ಅಪಾಯ ಹೆಚ್ಚು.

ಮಳೆಯಿಲ್ಲದೆ ನೀರಿನ ಅಭಾವ ಉಂಟಾಗಿ, ಅದು ಕೃಷಿ ನಾಶ, ಆಹಾರದ ಕೊರತೆ, ಆರ್ಥಿಕ ಕುಸಿತ, ಉದ್ಯೋಗ ನಷ್ಟ ಮತ್ತು ಜನಸಾಮಾನ್ಯರ ವಲಸೆಯಂತಹ ಸರಣಿ ಗಂಭೀರ ಸಮಸ್ಯೆಗಳನ್ನು ಒಂದರ ನಂತರ ಮತ್ತೊಂದು ಸರಪಳಿ ಕೊಂಡಿ ದುರ್ಬಲಗೊಂಡು ಬರಗಾಲದ ಡೊಮಿನೊ ಎಫೆಕ್ಟ್(ವಿನಾಶಕಾರಿ ಪರಿಣಾಮ) ಉಂಟಾಗುವ ಸಾಧ್ಯತೆ ಅಧಿಕವಾಗಿದೆ. ಅಲ್ಲದೆ ಜಲಾಶಯಗಳಿಗೆ ಒಳಹರಿವು ಕುಸಿದರೆ ಕೃಷಿಯ ಜತೆಗೆ ಕುಡಿಯುವ ನೀರು, ವಿದ್ಯುತ್, ಪಶುಸಂಗೋಪನೆಗೂ ಸಂಕಷ್ಟ ಎದುರಾಗುತ್ತದೆ.

ಮೊದಲ ಹೊಡೆತ ಬಿತ್ತನೆಗೆ

ಕರ್ನಾಟಕದ ಕೃಷಿಯಲ್ಲಿ ಬಹುದೊಡ್ಡ ಪಾಲು ಮಳೆಯನ್ನೇ ಅವಲಂಬಿಸಿದೆ. ಹೀಗಾಗಿ ಮುಂಗಾರಿನ ಆರಂಭದಲ್ಲಿನ ಕೆಲವು ವಾರಗಳ ಮಳೆ ಕೊರತೆಯೂ ಇಡೀ ಬೆಳೆಯ ಚಕ್ರವನ್ನೇ ಬದಲಿಸಬಲ್ಲದು. ಅಂತೆಯೇ ಜೂನ್ ಮಧ್ಯಭಾಗದಲ್ಲಿಯೇ ಬರಗಾಲ ಆವರಿಸುವ ಸೂಚನೆ ಸಿಕ್ಕಿತ್ತು.

ರಾಜ್ಯದಲ್ಲಿ ಮುಂಗಾರು ಬಿತ್ತನೆ ಗುರಿಯ ಕೇವಲ ಶೇ.20ರಷ್ಟು ಪ್ರದೇಶದಲ್ಲಿ ಮಾತ್ರ ಬಿತ್ತನೆಯಾಗಿತ್ತು. ನೀರಾವರಿ ಪ್ರದೇಶದಲ್ಲಿ 24.43 ಲಕ್ಷ ಹೆಕ್ಟೇರ್ ಗುರಿಗೆ 5.86 ಲಕ್ಷ ಹೆಕ್ಟೇರ್ ಮತ್ತು ಮಳೆಯಾಶ್ರಿತ ಪ್ರದೇಶದಲ್ಲಿ 59.68 ಲಕ್ಷ ಹೆಕ್ಟೇರ್ ಗುರಿಗೆ ಕೇವಲ 11.23 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ನಡೆದಿತ್ತು. ಬಿತ್ತನೆ ವಿಳಂಬವಾದರೆ ದೀರ್ಘಾವಧಿಯ ಬೆಳೆಗಳನ್ನು ಬಿಟ್ಟು ಅಲ್ಪಾವಧಿಯ ತಳಿಗಳಿಗೆ ರೈತರು ಬದಲಾಗಬೇಕಾಗುತ್ತದೆ; ಇದರಿಂದ ಅಂತಿಮ ಇಳುವರಿಯೂ ಕಡಿಮೆಯಾಗಬಹುದು ಎಂದು ತಜ್ಞರು ಆಗಲೇ ಎಚ್ಚರಿಸಿದ್ದರು.

ಮಳೆ ತಡವಾದರೆ ರೈತನಿಗೆ ಎರಡು ರೀತಿಯ ನಷ್ಟ. ಮೊದಲನೆಯದು ಬಿತ್ತನೆಯೇ ಸಾಧ್ಯವಾಗದೆ ಹೊಲ ಖಾಲಿ ಉಳಿಯುವುದು. ಎರಡನೆಯದು ಮಳೆ ಬರುತ್ತದೆಂಬ ನಿರೀಕ್ಷೆಯಲ್ಲಿ ಬಿತ್ತನೆ ಮಾಡಿದ ನಂತರ ಮೊಳಕೆ ಒಣಗಿದರೆ ಮರುಬಿತ್ತನೆ ಮಾಡಬೇಕಾಗುತ್ತದೆ. ಆಗ ಬೀಜ, ಗೊಬ್ಬರ, ಕಾರ್ಮಿಕ ವೆಚ್ಚ ಎಲ್ಲದಕ್ಕೂ ಎರಡನೇ ಬಾರಿಯೂ ಬಂಡವಾಳ ಹಾಕಬೇಕಾಗುತ್ತದೆ. ಅಲ್ಲದೆ ಮಳೆ ಕೈಕೊಟ್ಟರೆ ಈ ಆರಂಭಿಕ ಬಂಡವಾಳವೇ ರೈತನ ಮೇಲಿನ ಸಾಲವಾಗಿ ಉಳಿಯುತ್ತದೆ. ಉದಾಹರಣೆಗೆ, ಒಂದು ಎಕರೆ ಬಿತ್ತನೆಗೆ ಕನಿಷ್ಠ ₹20,000 ಖರ್ಚಾಗುತ್ತದೆ. ಬೆಳೆ ಬಿತ್ತಿದ ಬಳಿಕ ಮಳೆ ಕೈಕೊಟ್ಟರೆ ಲಾಭವಿರಲಿ ಹಾಕಿದ ಬಂಡವಾಳವೂ ಇಲ್ಲದಂತಾಗುತ್ತದೆ. ರೈತನ ಬಳಿ ಮರುಪಾವತಿಗೆ ಆದಾಯದ ಮೂಲವಿಲ್ಲದೆ ಸಾಲಗಾರನಾಗುವ ಪರಿಸ್ಥಿತಿ ಎದುರಾಗುತ್ತದೆ.

ಮಳೆ ಕೊರತೆ ಯಾವ ಬೆಳೆಗಳಿಗೆ ಹೆಚ್ಚು ಅಪಾಯ?

ಈ ಬಾರಿ ಮೆಕ್ಕೆಜೋಳ, ಹತ್ತಿ, ಜೋಳ ಮತ್ತು ರಾಗಿ ಪ್ರಮುಖವಾಗಿ ಪರಿಣಾಮಕ್ಕೆ ಒಳಗಾಗುವ ಬೆಳೆಗಳೆಂದು ಕೃಷಿ ತಜ್ಞರು ಗುರುತಿಸಿದ್ದಾರೆ. ಆದರೆ ಭತ್ತದ ಬೆಳೆಗೆ ಅತ್ಯಂತ ಗಂಭೀರ ಸ್ಥಿತಿ ಎದುರಾಗಬಹುದು.

ಅತಿಹೆಚ್ಚು ನೀರಿನ ಅವಶ್ಯಕತೆಯಿರುವ ಬೆಳೆ ಭತ್ತ.



ಮೂರು ತಿಂಗಳ ಬೆಳೆ ಅವಧಿಯಲ್ಲಿ ಭತ್ತಕ್ಕೆ ಸುಮಾರು 1,200ರಿಂದ 1,500 ಮಿ.ಮೀ. ನೀರು ಅಗತ್ಯವಿದ್ದರೆ, ರಾಗಿಗೆ ಸುಮಾರು 300 ಮಿ.ಮೀ. ನೀರು ಸಾಕಾಗುತ್ತದೆ. ಸಾಮಾನ್ಯವಾಗಿ ಜೂನ್-ಜುಲೈ ವೇಳೆಗೆ ಬಹುತೇಕ ಪ್ರದೇಶಗಳಲ್ಲಿ ಭತ್ತದ ನಾಟಿ ಪೂರ್ಣಗೊಂಡಿರಬೇಕಿತ್ತು. ಈ ವರ್ಷ ಹಲವು ಪ್ರದೇಶಗಳಲ್ಲಿ ನಾಟಿಯೇ ಆಗಿಲ್ಲ.

ದಕ್ಷಿಣ ಕನ್ನಡದಲ್ಲೂ ಭತ್ತದ ಗದ್ದೆಗಳಿಗೆ ನಿರಂತರ ತೇವಾಂಶ ಸಿಗದೆ ನಾಟಿ ವಿಳಂಬವಾಗಿದೆ. ಕೆಲವು ರೈತರಿಗೆ ಭತ್ತದ ಎರಡನೇ ಬೆಳೆ ಕೈತಪ್ಪುವ ಸಾಧ್ಯತೆಯೂ ಎದುರಾಗಿದೆ. ಹೀಗಾಗಿ ಎಳ್ಳು, ಅಲಸಂದೆ, ಉದ್ದು ಮೊದಲಾದ ಕಡಿಮೆ ನೀರು ಬೇಕಾಗುವ ಬೆಳೆಗಳಿಗೆ ಬದಲಾಗುವಂತೆ ಕೃಷಿ ಅಧಿಕಾರಿಗಳು ಸಲಹೆ ನೀಡುತ್ತಿದ್ದಾರೆ.

ಕಲಬುರಗಿಯಲ್ಲಿ ಹೆಸರು ಮತ್ತು ಉದ್ದು ಬೆಳೆಗಳ ಮೇಲೂ ಪರಿಣಾಮ ಬೀರಿದೆ. ಅಲ್ಲಿ ಹೆಸರು ಬಿತ್ತನೆ ಗುರಿ 54,000 ಹೆಕ್ಟೇರ್ ಇದ್ದರೆ 34,753 ಹೆಕ್ಟೇರ್‌ನಲ್ಲಿ ಮಾತ್ರ ಬಿತ್ತನೆ ಮಾಡಲಾಗಿತ್ತು. ಉದ್ದು 25,000 ಹೆಕ್ಟೇರ್ ಗುರಿಗೆ 12,631 ಹೆಕ್ಟೇರ್‌ಗೆ ಸೀಮಿತವಾಗಿತ್ತು. ಸೋಯಾಬೀನ್ ಬಿತ್ತನೆಯೂ ಗುರಿಗಿಂತ ಕಡಿಮೆಯಾಗಿತ್ತು. ಮತ್ತೆ ಬಿತ್ತನೆಗೆ ವಿಳಂಬವಾದ್ದರಿಂದ ಇಳುವರಿ ಕುಂಠಿತ, ಕೀಟದ ಹಾವಳಿ, ನೀರು ಕೊರತೆಯಂತಹ ಸಮಸ್ಯಗಳು ಕಾಡಬಹುದೆಂದು ರೈತರು ಹಿಂದೆ ಸರಿದಿದ್ದಾರೆ.

50 ಲಕ್ಷ ಟನ್ ಬೆಳೆ ಉತ್ಪಾದನೆ ನಷ್ಟ: ಕೇವಲ ರೈತನ ನಷ್ಟವಲ್ಲ

ಆಹಾರಧಾನ್ಯ ಉತ್ಪಾದನೆ ಕುಸಿತವನ್ನು ಕೇವಲ ಕೃಷಿ ಇಲಾಖೆಯ ಅಂಕಿಅಂಶವೆಂದು ನೋಡಲಾಗದು. ಅದರ ಪರಿಣಾಮ ರೈತನ ಹೊಲದಿಂದ ಗ್ರಾಹಕನ ಅಡುಗೆಮನೆಯವರೆಗೆ ಸಾಗುತ್ತದೆ. ಉತ್ಪಾದನೆ ಕಡಿಮೆಯಾದರೆ ಮೊದಲಿಗೆ ಮಾರುಕಟ್ಟೆಗೆ ಬರುವ ಆಹಾರಧಾನ್ಯದ ಪ್ರಮಾಣ ಕುಸಿಯುತ್ತದೆ. ರಾಗಿ, ಜೋಳ, ಅಕ್ಕಿ, ಬೇಳೆಕಾಳುಗಳು ಮತ್ತು ಮೆಕ್ಕೆಜೋಳದ ಪೂರೈಕೆಯಲ್ಲಿ ಕೊರತೆ ಉಂಟಾದರೆ ಬೆಲೆ ಏರಿಕೆಯ ಒತ್ತಡ ಉಂಟಾಗಬಹುದು. ಪೂರೈಕೆಯ ಕೊರತೆಯನ್ನು ಹೊರರಾಜ್ಯಗಳಿಂದ ಸರಕು ತರಿಸುವ ಮೂಲಕ ಸರಿಪಡಿಸಬೇಕಾದರೆ ಸಾಗಣೆ ವೆಚ್ಚವೂ ಬೆಲೆಯಲ್ಲಿ ಸೇರುತ್ತದೆ. ವಿಶೇಷವಾಗಿ ಬೇಳೆಕಾಳುಗಳ ಉತ್ಪಾದನೆ ಕುಸಿದರೆ ಆಹಾರ ಹಣದುಬ್ಬರದ ಮೇಲೆ ನೇರ ಪರಿಣಾಮ ಬೀರುವ ಸಾಧ್ಯತೆ ಹೆಚ್ಚು.

ತರಕಾರಿ ಮತ್ತು ಹಣ್ಣುಗಳ ಬೆಲೆಗೂ ಬಿಸಿ

ಬರದ ಪರಿಣಾಮ ಆಹಾರಧಾನ್ಯಕ್ಕೆ ಮಾತ್ರ ಸೀಮಿತವಾಗುವುದಿಲ್ಲ. ಕೆರೆ, ಬಾವಿ, ಕೊಳವೆಬಾವಿಗಳಲ್ಲಿ ನೀರು ಕಡಿಮೆಯಾದರೆ ತರಕಾರಿ ಮತ್ತು ತೋಟಗಾರಿಕಾ ಬೆಳೆಗಳಿಗೂ ನೀರಿನ ಕೊರತೆ ಎದುರಾಗುತ್ತದೆ. ಮೊದಲು ರೈತರು ಹೆಚ್ಚು ನೀರು ಬೇಕಾಗುವ ಬೆಳೆಗಳ ವಿಸ್ತೀರ್ಣವನ್ನು ಕಡಿಮೆ ಮಾಡುತ್ತಾರೆ. ನಂತರ ಉತ್ಪಾದನೆ ಇಳಿಯುತ್ತದೆ. ಸ್ಥಳೀಯ ಮಾರುಕಟ್ಟೆಗೆ ಸರಕು ಕಡಿಮೆಯಾಗುತ್ತಿದ್ದಂತೆ ಟೊಮ್ಯಾಟೊ, ಈರುಳ್ಳಿ, ತರಕಾರಿ ಮತ್ತು ಹಣ್ಣುಗಳ ಬೆಲೆಯಲ್ಲಿ ಏರಿಳಿತ ಹೆಚ್ಚಬಹುದು.

ತೋಟಗಾರಿಕಾ ಬೆಳೆಗಳಲ್ಲಿ ಮಳೆ ಕೊರತೆಯ ಪರಿಣಾಮ ತಕ್ಷಣವೇ ಸಂಪೂರ್ಣವಾಗಿ ಕಾಣಿಸದಿದ್ದರೂ ಹೂ ಬಿಡುವಿಕೆ, ಕಾಯಿ ಕಟ್ಟುವಿಕೆ ಹಾಗೂ ಮುಂದಿನ ಹಂಗಾಮಿನ ಇಳುವರಿಯ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ.

ಹಾಲಿನ ಉತ್ಪಾದನೆಯ ಮೇಲೂ ಪರಿಣಾಮ

ಪಶುಸಂಗೋಪನೆಯ ಮೇಲೆ ಬರದ ಇನ್ನೊಂದು ದೊಡ್ಡ ಪರಿಣಾಮ ಬೀರುತ್ತದೆ. ಮಳೆಯಿಲ್ಲದೆ ಹುಲ್ಲುಗಾವಲು ಒಣಗುತ್ತದೆ. ಜೋಳ, ಮೆಕ್ಕೆಜೋಳ ಮತ್ತಿತರ ಬೆಳೆಗಳ ಉತ್ಪಾದನೆ ಕಡಿಮೆಯಾದರೆ ಕೃಷಿ ತ್ಯಾಜ್ಯಗಳಿಂದ ಸಿಗುವ ಮೇವು ಸಹ ಕಡಿಮೆಯಾಗುತ್ತದೆ. ಹಸಿರು ಮೇವಿನ ಕೊರತೆಯಿಂದ ರೈತರು ಒಣಮೇವು ಮತ್ತು ಪಶು ಆಹಾರವನ್ನು ಖರೀದಿಸಬೇಕಾಗುತ್ತದೆ. ಇದರಿಂದ ಹೈನುಗಾರಿಕೆಯ ಉತ್ಪಾದನಾ ವೆಚ್ಚ ಹೆಚ್ಚುತ್ತದೆ. ಅಲ್ಲದೆ ಹಾಲಿಂಡುವ ರಾಸುಗಳಿಗೆ ಒಣಮೇವು ನೀಡಿದರೆ ಹಾಲಿನ ಪ್ರಮಾಣವೂ ಕುಂಠಿತವಾಗುತ್ತದೆ.

ನೀರಿನ ಕೊರತೆ ಮತ್ತು ಪೌಷ್ಠಿಕ ಆಹಾರದ ಕೊರತೆ ಹಾಲಿನ ಉತ್ಪಾದನೆಗೂ ಹೊಡೆತ ನೀಡಬಹುದು. ಕೃಷಿ ಬೆಳೆ ವಿಫಲವಾದ ಕುಟುಂಬಗಳಿಗೆ ಹೈನುಗಾರಿಕೆ ಪರ್ಯಾಯ ಆದಾಯದ ಮೂಲವಾಗಿರುತ್ತದೆ. ಅದಕ್ಕೂ ಬರದ ಹೊಡೆತ ಬಿದ್ದರೆ ಗ್ರಾಮೀಣ ಕುಟುಂಬಗಳ ಆರ್ಥಿಕ ಸುರಕ್ಷತೆಯ ಸರಪಳಿಯ ಕೊಂಡಿಗಳೇ ದುರ್ಬಲವಾಗುತ್ತವೆ.

ಕೃಷಿ ಕಾರ್ಮಿಕರಿಗೆ ಕೆಲಸವಿಲ್ಲ

ಬೆಳೆ ಕಡಿಮೆಯಾಗುವುದು ರೈತನ ಆದಾಯವನ್ನು ಮಾತ್ರ ಕಡಿಮೆ ಮಾಡುವುದಿಲ್ಲ. ಬಿತ್ತನೆ, ಕಳೆ ತೆಗೆಯುವುದು, ಗೊಬ್ಬರ ಹಾಕುವುದು, ಕೊಯ್ಲು ಮುಂತಾದ ಕೆಲಸಗಳ ಮೇಲೆ ಅವಲಂಬನೆಯಾಗಿರುವ ಲಕ್ಷಾಂತರ ಮಂದಿ ಕೃಷಿ ಕಾರ್ಮಿಕರ ಉದ್ಯೋಗ ದಿನಗಳೂ ಕಡಿಮೆಯಾಗುತ್ತವೆ. ಇದರಿಂದಾಗಿ ಖರೀದಿ ಕಡಿಮೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ಸ್ಥಳೀಯ ವ್ಯಾಪಾರ-ವ್ಯವಹಾರಗಳ ಮೇಲೆಯೂ ಕಾರ್ಗತ್ತಲು ಕವಿಯುತ್ತದೆ.

ಬೆಳಗಾವಿಯಲ್ಲಿ ಈಗಾಗಲೇ ಕೃಷಿ ಕೆಲಸಗಳು ಕುಸಿದಿರುವುದರಿಂದ ಕೆಲವು ಗ್ರಾಮೀಣ ಕುಟುಂಬಗಳು ಉದ್ಯೋಗಕ್ಕಾಗಿ ಹೊರರಾಜ್ಯಗಳಿಗೆ ವಲಸೆ ಹೋಗುತ್ತಿರುವುದು ಗಮನಾರ್ಹ. ಧಾರವಾಡದಲ್ಲಿಯೂ ರೈತ ಕುಟುಂಬಗಳ ಸದಸ್ಯರು ನಗರಗಳಲ್ಲಿ ಕೂಲಿ ಕೆಲಸಕ್ಕೆ ತೆರಳುವ ಪರಿಸ್ಥಿತಿ ಕುರಿತು ಹೇಳಿಕೊಂಡಿದ್ದಾರೆ. ಹೀಗಾಗಿ ಬರ ತೀವ್ರಗೊಂಡರೆ ಬೆಂಗಳೂರು, ಹುಬ್ಬಳ್ಳಿ-ಧಾರವಾಡ, ಮಂಗಳೂರು, ಮೈಸೂರು ಸೇರಿದಂತೆ ನಗರಗಳತ್ತ ಋತುಮಾನಿಕ ಗ್ರಾಮೀಣ ವಲಸೆ ಹೆಚ್ಚುವ ಸಾಧ್ಯತೆ ಇದೆ.

ಸಾಲದ ಸುಳಿಯಲ್ಲಿ ರೈತ

ರೈತರು ಈಗಾಗಲೇ ಬೀಜ ಖರೀದಿಸಿದ್ದಾನೆ. ಗೊಬ್ಬರ ಹಾಕಿದ್ದಾನೆ. ಟ್ರ್ಯಾಕ್ಟರ್‌ಗೆ ಹಣ ಕೊಟ್ಟಿದ್ದಾನೆ. ಕಾರ್ಮಿಕರ ಕೂಲಿ ಪಾವತಿಸಿದ್ದಾನೆ. ಕೆಲವರು ಮರುಬಿತ್ತನೆಯನ್ನೂ ಮಾಡಿದ್ದಾರೆ. ಆದರೆ ಬೆಳೆ ಬಂದಿಲ್ಲವೆಂದರೆ ಆದಾಯ ಶೂನ್ಯಕ್ಕೆ ಸಮೀಪಿಸಬಹುದು; ಖರ್ಚು ಮಾತ್ರ ಸಾಲವಾಗಿ ಉಳಿಯುತ್ತದೆ.

ಮುಂದಿನ ಹಂಗಾಮಿನ ಬಿತ್ತನೆಗೆ ಮತ್ತೆ ಹಣ ಬೇಕಾಗುತ್ತದೆ. ಹೀಗಾಗಿ ಬ್ಯಾಂಕ್ ಸಾಲ, ಸಹಕಾರಿ ಸಾಲ ಹಾಗೂ ಖಾಸಗಿ ಸಾಲದ ಮೇಲಿನ ಅವಲಂಬನೆ ಹೆಚ್ಚಬಹುದು. ಬೆಳೆವಿಮೆ ಮತ್ತು ಸರ್ಕಾರದ ಪರಿಹಾರ ಎಷ್ಟು ಬೇಗ ಹಾಗೂ ಎಷ್ಟು ಸಮರ್ಪಕವಾಗಿ ರೈತನ ಕೈ ಸೇರುತ್ತದೆ ಎಂಬುದು ಅತ್ಯಂತ ನಿರ್ಣಾಯಕವಾಗುತ್ತದೆ. ಹಾಗಾಗಿ ಬರದ ಅತ್ಯಂತ ಅಪಾಯಕಾರಿ ಆರ್ಥಿಕ ಪರಿಣಾಮ.

ಕುಡಿಯುವ ನೀರಿಗೂ ಅಪಾಯ

ಮಳೆ ಕೊರತೆಯ ಪರಿಣಾಮ ಬಹುಶಃ ಮುಂದಿನ ಬೇಸಿಗೆಯಲ್ಲಿ ಇನ್ನಷ್ಟು ಸ್ಪಷ್ಟವಾಗಿ ಕಾಣಬಹುದು. ಜಲಾಶಯಗಳು ಪೂರ್ಣ ಪ್ರಮಾಣದಲ್ಲಿ ತುಂಬದಿದ್ದರೆ ನಗರ ಮತ್ತು ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳ ಮೇಲೆ ಒತ್ತಡ ಹೆಚ್ಚುತ್ತದೆ. ಕೆರೆಗಳು ತುಂಬದಿದ್ದರೆ ಅಂತರ್ಜಲ ಮರುಪೂರಣವೂ ಕಡಿಮೆಯಾಗುತ್ತದೆ. ಈಗಾಗಲೇ ಕೆಲವು ಪ್ರದೇಶಗಳಲ್ಲಿ ಬಾವಿ ಮತ್ತು ಕೊಳವೆಬಾವಿಗಳು ಒಣಗುತ್ತಿರುವ ಕುರಿತು ವರದಿಗಳಿವೆ.

ಮುಂಗಾರು ಅಂತ್ಯದವರೆಗೂ ಪರಿಸ್ಥಿತಿ ಸುಧಾರಿಸದಿದ್ದರೆ 2027ರ ಫೆಬ್ರವರಿ-ಮೇ ಅವಧಿಯಲ್ಲಿ ನೀರಿನ ಅಭಾವ ಮತ್ತಷ್ಟು ತೀವ್ರವಾಗುವ ಅಪಾಯವನ್ನು ನಿರ್ಲಕ್ಷಿಸಲಾಗದು.

ಜಲಾಶಯಗಳು ತುಂಬದಿದ್ದರೆ ಎರಡನೇ ಸಂಕಷ್ಟ

ಕರ್ನಾಟಕದ ಕೃಷಿ ಸಮಸ್ಯೆಯನ್ನು ಕೇವಲ ಹೊಲದಲ್ಲಿ ಬೀಳುವ ಮಳೆಯ ಪ್ರಮಾಣದಿಂದ ಅಳೆಯಲು ಸಾಧ್ಯವಿಲ್ಲ. ಪಶ್ಚಿಮಘಟ್ಟ ಮತ್ತು ಪ್ರಮುಖ ನದಿಗಳ ಜಲಾನಯನ ಪ್ರದೇಶಗಳಲ್ಲಿ ಬೀಳುವ ಮಳೆಯೂ ಅಷ್ಟೇ ಮುಖ್ಯವಾಗುತ್ತದೆ.

ಜೂನ್ ಮತ್ತು ಜುಲೈನಲ್ಲಿ ರಾಜ್ಯದ ಪ್ರಮುಖ ಜಲಾಶಯಗಳಿಗೆ ಅತ್ಯಲ್ಪ ಅಥವಾ ಯಾವುದೇ ಗಮನಾರ್ಹ ಒಳಹರಿವು ಇಲ್ಲದ ಕಾರಣ ಮತ್ತು ತುಂಗಭದ್ರಾ ಜಲಾಶಯಗಳಿಂದ ನೀರಾವರಿಗೆ ಇನ್ನೂ ನೀರು ಬಿಡುಗಡೆ ಮಾಡಿಲ್ಲ. ಏಕೆಂದರೆ ಬರದ ಪರಿಸ್ಥಿತಿಯಲ್ಲಿ ಸರ್ಕಾರ ಕುಡಿಯುವ ನೀರಿಗೆ ಮೊದಲ ಆದ್ಯತೆ ನೀಡುತ್ತಿರುವುದರಿಂದ ಕೃಷಿಗೆ ಲಭ್ಯವಾಗುವ ನೀರು ಮತ್ತಷ್ಟು ಸೀಮಿತವಾಗಬಹುದು. ಇದರ ಪರಿಣಾಮ ಎರಡು ಹಂತಗಳಲ್ಲಿ ನಷ್ಟವಾಗುವ ಸಾಧ್ಯೆ ಇದೆ.

ಈಗಿನ ಮುಂಗಾರು ಬೆಳೆಗಳಿಗೆ ನೀರು ಸಿಗುವುದಿಲ್ಲ. ಮುಂದಿನ ಹಿಂಗಾರು ಹಂಗಾಮಿನಲ್ಲೂ ಜಲಾಶಯಗಳಲ್ಲಿ ಸಾಕಷ್ಟು ಸಂಗ್ರಹ ಇಲ್ಲದಿದ್ದರೆ ನೀರಾವರಿ ಪ್ರದೇಶದಲ್ಲಿಯೂ ಬಿತ್ತನೆ ಕಡಿಮೆಯಾಗಬಹುದು. ಹೀಗಾಗಿ 2026ರ ಮಳೆ ಕೊರತೆ ಕೇವಲ ಒಂದು ಹಂಗಾಮಿನ ಸಮಸ್ಯೆಯಾಗಿ ಉಳಿಯದೆ 2026-27ರ ಕೃಷಿ ವರ್ಷವನ್ನೇ ಬಾಧಿಸುವ ಸಾಧ್ಯತೆ ಇದೆ.

ಜಲವಿದ್ಯುತ್ ಉತ್ಪಾದನೆಗೂ ಹೊಡೆತ

ಜಲಾಶಯಗಳ ನೀರಿನ ಮಟ್ಟ ಕಡಿಮೆಯಾದರೆ ಕೃಷಿ ಮತ್ತು ಕುಡಿಯುವ ನೀರಿನ ಜತೆಗೆ ಜಲವಿದ್ಯುತ್ ಉತ್ಪಾದನೆಯ ಮೇಲೂ ಒತ್ತಡ ಬರಬಹುದು. ವಿದ್ಯುತ್ ಬೇಡಿಕೆ ಹೆಚ್ಚಿರುವ ಬೇಸಿಗೆಯಲ್ಲಿ ಜಲವಿದ್ಯುತ್ ಉತ್ಪಾದನೆ ಕುಸಿದರೆ ರಾಜ್ಯವು ಇತರ ಮೂಲಗಳಿಂದ ಹೆಚ್ಚು ವಿದ್ಯುತ್ ಖರೀದಿಸಬೇಕಾಗಬಹುದು.

ಮತ್ತೊಂದೆಡೆ ಮಳೆ ಕೊರತೆಯ ಜತೆಗೆ ಉಷ್ಣಾಂಶ ಏರಿದರೆ ನೀರಾವರಿ ಪಂಪ್‌ಸೆಟ್‌ಗಳ ಬಳಕೆ ಹೆಚ್ಚುತ್ತದೆ. ಅಂದರೆ ವಿದ್ಯುತ್ ಉತ್ಪಾದನೆಯ ಒಂದು ಮೂಲ ದುರ್ಬಲವಾಗುವಾಗಲೇ ಕೃಷಿ ಮತ್ತು ಗೃಹ ಬಳಕೆಯ ಬೇಡಿಕೆ ಹೆಚ್ಚುವ ಸಾಧ್ಯತೆ ಇದೆ.

ಮುಂದಿನ ದಿನಗಳಲ್ಲಿ ಎದುರಾಗಬಹುದಾದ ಪ್ರಮುಖ ಪರಿಣಾಮಗಳು

ಮಳೆ ಕೊರತೆ ಮುಂದುವರಿದರೆ ಕರ್ನಾಟಕ ಒಂದೇ ಸಮಯದಲ್ಲಿ ಬೆಳೆ ನಷ್ಟ ರೈತರ ಆದಾಯ ಕುಸಿತ ಸಾಲದ ಹೊರೆ ಹೆಚ್ಚಳ ಕೃಷಿ ಕೂಲಿ ಕೆಲಸ ಕಡಿತ ಗ್ರಾಮೀಣ ವಲಸೆ ಹೆಚ್ಚಳ ಆಹಾರಧಾನ್ಯ ಪೂರೈಕೆ ಕುಸಿತ ಆಹಾರ ಬೆಲೆ ಏರಿಕೆ ಮೇವು ಕೊರತೆ ಹೈನುಗಾರಿಕೆ ವೆಚ್ಚ ಹೆಚ್ಚಳ ಜಲಾಶಯಗಳ ನೀರಿನ ಕೊರತೆ ಕುಡಿಯುವ ನೀರು ಮತ್ತು ವಿದ್ಯುತ್ ಮೇಲಿನ ಒತ್ತಡದಂತಹ ಹಲವು ಪರಸ್ಪರ ಸಂಬಂಧಿತ ಸಮಸ್ಯೆಗಳನ್ನು ಎದುರಿಸಬೇಕಾಗಬಹುದು.

ಅಂದರೆ, ಮಳೆಯ ಕೊರತೆ ಕೃಷಿ ಇಲಾಖೆಯ ಸಮಸ್ಯೆಯಾಗಿ ಆರಂಭವಾಗಿ, ಅಂತಿಮವಾಗಿ ಆಹಾರ, ಉದ್ಯೋಗ, ಹಣದುಬ್ಬರ, ಗ್ರಾಮೀಣ ಆರ್ಥಿಕತೆ, ನೀರು ಮತ್ತು ವಿದ್ಯುತ್‌ವರೆಗೂ ವ್ಯಾಪಿಸಬಹುದು. ಈ ಹಂತದಲ್ಲಿ ಸರ್ಕಾರ ಕೇವಲ ಮಳೆಯನ್ನು ನಿರೀಕ್ಷಿಸಿ ಕಾಯದೇ ಜಿಲ್ಲೆ ಮತ್ತು ತಾಲೂಕುವಾರು ಮಳೆ ಕೊರತೆ, ಬಿತ್ತನೆ ಪ್ರದೇಶ, ಬೆಳೆ ಸ್ಥಿತಿ ಮತ್ತು ಜಲಾಶಯ-ಕೆರೆಗಳ ಪರಿಸ್ಥಿತಿಯನ್ನು ನಿರಂತರವಾಗಿ ಅಳೆಯಬೇಕಾಗಿದೆ.

ತೀವ್ರವಾಗಿ ಬಾಧಿತ ಪ್ರದೇಶಗಳಲ್ಲಿ ಅಲ್ಪಾವಧಿ ಮತ್ತು ಕಡಿಮೆ ನೀರಿನ ಬೆಳೆಗಳಿಗೆ ರೈತರನ್ನು ವರ್ಗಾಯಿಸುವುದು, ಪರ್ಯಾಯ ಬೀಜಗಳನ್ನು ಉಚಿತ ಅಥವಾ ರಿಯಾಯಿತಿ ದರದಲ್ಲಿ ಒದಗಿಸುವುದು, ಮೇವು ಸಂಗ್ರಹ ಆರಂಭಿಸುವುದು, ಕುಡಿಯುವ ನೀರಿನ ಮೂಲಗಳನ್ನು ಗುರುತಿಸುವುದು, ಬೆಳೆ ವಿಮೆ ಪ್ರಕ್ರಿಯೆಯನ್ನು ಸರಳಗೊಳಿಸುವುದು ಹಾಗೂ ಗ್ರಾಮೀಣ ಉದ್ಯೋಗದ ಬೇಡಿಕೆ ಹೆಚ್ಚುವ ಸಾಧ್ಯತೆಗೆ ಮುಂಚಿತವಾಗಿ ಸಿದ್ಧತೆ ಮಾಡಿಕೊಳ್ಳುವುದು ಅಗತ್ಯ.

ಅಷ್ಟೇ ಮುಖ್ಯವಾಗಿ ಜಲಾಶಯದಲ್ಲಿರುವ ನೀರನ್ನು ಕುಡಿಯುವ ನೀರುಕೃಷಿಕೈಗಾರಿಕೆ ನಡುವೆ ಹೇಗೆ ಹಂಚಿಕೆ ಮಾಡಬೇಕು ಎಂಬುವ ಗಂಭೀರತೆ ಮುಂದಿನ ತಿಂಗಳುಗಳಲ್ಲಿ ಅತ್ಯಂತ ಸೂಕ್ಷ್ಮವಾಗಬಹುದು.

ಮುಂದೆ ಮಳೆ ಬಂದರೂ ಎಲ್ಲ ನಷ್ಟಗಳು ಮರಳಿ ಬರುವುದಿಲ್ಲ

ಆಗಸ್ಟ್ ಮತ್ತು ಸೆಪ್ಟೆಂಬರ್ ಮಳೆ, ಜಲಾಶಯಗಳ ಒಳಹರಿವು, ಮರುಬಿತ್ತನೆ, ಪರ್ಯಾಯ ಬೆಳೆಗಳಿಗೆ ಮರುಜೀವ ಹಾಗೂ ಹಿಂಗಾರು ಹಂಗಾಮಿನ ಪರಿಸ್ಥಿತಿಯ ಆಧಾರದಲ್ಲಿ ನಷ್ಟದ ಪ್ರಮಾಣ ಬದಲಾಗಬಹುದು. ಆದರೆ ಜೂನ್-ಜುಲೈನಲ್ಲಿ ಆಗಬೇಕಿದ್ದ ಬಿತ್ತನೆ ಮತ್ತು ಬೆಳೆ ಬೆಳವಣಿಗೆಯ ಸಮಯ ಕಳೆದುಹೋದ ಕಾರಣ ಮುಂದೆ ಮಳೆ ಬಂದ ಮಾತ್ರಕ್ಕೆ ಈಗಾಗಲೇ ಸಂಭವಿಸಿರುವ ಎಲ್ಲ ಕೃಷಿ ನಷ್ಟವನ್ನು ಸರಿಪಡಿಸಲು ಸಾಧ್ಯವಿಲ್ಲ.

2026ರ ಮಳೆ ಕೊರತೆಯ ಕಥೆ ಕೇವಲ ಈ ವರ್ಷ ಎಷ್ಟು ಮಳೆ ಕಡಿಮೆಯಾಯಿತು? ಎಂಬ ಪ್ರಶ್ನೆಯಲ್ಲ. ಇದರ ಪರಿಣಾಮವಾಗಿ ಕರ್ನಾಟಕ ಎಷ್ಟು ಆಹಾರ ಕಳೆದುಕೊಳ್ಳಲಿದೆ, ಎಷ್ಟು ರೈತರು ಆದಾಯ ಕಳೆದುಕೊಳ್ಳಲಿದ್ದಾರೆ, ಎಷ್ಟು ಕೃಷಿ ಕಾರ್ಮಿಕರು ಉದ್ಯೋಗ ಕಳೆದುಕೊಳ್ಳಲಿದ್ದಾರೆ ಮತ್ತು ಮುಂದಿನ ಬೇಸಿಗೆಯಲ್ಲಿ ರಾಜ್ಯಕ್ಕೆ ಎಷ್ಟು ನೀರು ಉಳಿಯಲಿದೆ ಎಂಬ ಗಂಭೀರತೆಗಳಿಗೆ ಮುಂದಿನ ವಾರಗಳ ಮಳೆಯೇ ಸ್ಪಷ್ಟತೆ ನೀಡಲಿದೆ. ಆದರೆ ಈಗಿರುವ ಸೂಚನೆಗಳಿಂದ ರಾಜ್ಯದ ಕೃಷಿ ಬರ ಕೇವಲ ಹವಾಮಾನ ಸಮಸ್ಯೆಯಾಗಿ ಅಲ್ಲ, ಆಹಾರ ಮತ್ತು ಗ್ರಾಮೀಣ ಆರ್ಥಿಕತೆಯ ಸಂಕಷ್ಟವಾಗಿ ಎದುರಿಸಲು ಈಗಿನಿಂದಲೇ ಸಿದ್ಧವಾಗಬೇಕಿದೆ ಎಂಬುದನ್ನು ಸಾಬೀತುಪಡಿಸಿದೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR